ಸಂಪುಟ 01 । ಸಂಚಿಕೆ 41 । ಸೋಮವಾರ 22 ಡಿಸೆಂಬರ್ 2025 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE
ಸತ್ಯದ ದಿಕ್ಕು TRUE PATH
ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING
ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ
RNI code: KNKAN/25/A3581
ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1.ರಾಷ್ಟ್ರೀಯ ಗಣಿತ ದಿನ — National Mathematics Day**

ಈ ದಿನವು ಭಾರತದ ಗಣಿತಜ್ಞ ಶ್ರೀನಿವಾಸ ರಮಣುಜನ್ ಅವರ ಜನ್ಮದಿನ (22 ಡಿಸೆಂಬರ್) ಅನ್ನು ಸ್ಮರಿಸಲು ಆಚ–'ರಿಸಲಾಗುತ್ತದೆ. ರಮಣುಜನ್ ಅವರು ಸಂಖ್ಯೆ ಸಿದ್ಧಾಂತ, ನಿರಂತರ ಸರಣಿಗಳು, ಅನಂತ ಸರಣಿಗಳು ಮತ್ತು ಗಣಿತದ ಹಲವಾರು ಶಾಖೆಗಳಲ್ಲಿ ವಿಶಿಷ್ಟ ಕೊಡುಗೆಗಳನ್ನು ನೀಡಿದ್ದರು. ಸರ್ಕಾರವು 2012 ರಿಂದ ಈ ದಿನವನ್ನು ರಾಷ್ಟ್ರೀಯ ಗಣಿತ ದಿನ ಎಂದು ಘೋಷಿಸಿದೆ, ವಿಶೇಷವಾಗಿ ಈ ದಿನ ಶಾಲೆಗಳಲ್ಲಿ ಗಣಿತ–ಸಂಬಂಧಿತ ಶಿಬಿರಗಳು, ಕ್ವಿಜ್–ಪರೀಕ್ಷೆಗಳು, ಕಾರ್ಯಾಗಾರಗಳು ಆಯೋಜಿಸಲಾಗುತ್ತದೆ.ಗಣಿತ ದಿನದ ಉದ್ದೇಶ: ವಿದ್ಯಾರ್ಥಿಗಳಲ್ಲಿ ಗಣಿತದ ಮೇಲಿನ ಆಸಕ್ತಿಯನ್ನು ಹೆಚ್ಚಿಸುವುದು.ಲೋಕಕ್ಕೆ ಗಣಿತದ ಪ್ರಯೋಜನಗಳನ್ನು ಪರಿಚಯಿಸುವುದು — ನಿರ್ಧಾರಗೊಳಿಸುವಿಕೆ, ಸಮಸ್ಯಾ ಬಗೆಹರಿಸುವಿಕೆ ಮತ್ತು ವಿಜ್ಞಾನ–ತಂತ್ರಜ್ಞಾನದಲ್ಲಿ ಅವಶ್ಯಕತೆ.

## ಸುಭಾಷಿತ

**ಮೊದಲ ವಿಜಯದ ಬಳಿಕ ವಿಶ್ರಾಂತಿಗೆ ತೆರಳಬೇಡಿ.
ನಿಮ್ಮ ಎರಡನೇ ಕಾರ್ಯದಲ್ಲಿ ಸೋಲುಂಟಾದರೆ,
ಮೊದಲ ಜಯ ಕೇವಲ ಅದೃಷ್ಟದ್ದು ಎಂದು ಹೇಳಲು
ಹಲವುಬಾಯಿಗಳು ಕಾಯುತ್ತಿರುತ್ತವೆ.**

– ಡಾ. ಎಪಿಜೆ ಅಬ್ದುಲ್ ಕಲಾಂ

## ರಾಮ್ ಜಿ ಮಸೂದೆಯ ಬಗ್ಗೆ ಕಾಂಗ್ರೆಸ್ ಹೊಸ ದಾಳ, ಬಿಜೆಪಿ ಫುಲ್ ಗರಂ, ರಾಷ್ಟ್ರಪತಿಗಳ ಅನುಮೋದನೆಗೂ ಮುನ್ನ ಹುಟ್ಟಿಕೊಂಡಿದೆ ಸಮಸ್ಯೆ!



❑ ನೈಜ್ಯ ದೆಸೆ ನ್ಯೂಸ್

ನವದೆಹಲಿ(ಡಿ.21) : MNREGA ಬದಲಿಗೆ ಬರುವ "ವಿಕಾಸಿತ್ ಭಾರತ್ – ಉದ್ಯೋಗ ಮತ್ತು ಜೀವನೋಪಾಯ ಮಿಷನ್ ಗ್ರಾಮೀಣ (VB-G RAM G) ಮಸೂದೆ"ಯ ರಾಜಕೀಯ ಸಂಘರ್ಷ ತೀವ್ರಗೊಂಡಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಕು–ರಿತ ಸಂಸದೀಯ ಸ್ಥಾಯಿ ಸಮಿತಿಯ ಅಧ್ಯಕ್ಷ ಕಾಂಗ್ರೆಸ್ ಸಂಸದ ಸಪ್ತಗಿರಿ ಶಂಕರ್ ಉಲಕ ಅವರು ಡಿಸೆಂಬರ್ 29 ರಂದು ಸಮಿತಿಯ ಸಭೆಯನ್ನು ಕರೆದಿದ್ದಾರೆ.VB-G RAM G ಮಸೂದೆಯನ್ನು ಚರ್ಚಿಸಲು ಮತ್ತು ಅದನ್ನು ಯುಪಿಎ ಸರ್ಕಾರದ MNREGA ಯೋಜನೆಯೊಂದಿಗೆ ಹೋಲಿಸಲು ಅವರು ನಿರ್ಧರಿಸಿದ್ದಾರೆ. ಈ ಕ್ರಮವನ್ನು ಪ್ರಸ್ತಾವಿತ ಶಾಸನದ ಮೇಲಿನ ಮತ್ತಷ್ಟು ರಾಜಕೀಯ ಹೋರಾಟವೆಂದು ಪರಿಗಣಿಸಲಾಗಿದೆ, ಇದನ್ನು ಆಡಳಿತ ಓಆಂ ಸದಸ್ಯರು ಬಲವಾಗಿ ವಿರೋಧಿಸಿದ್ದಾರೆ.ಸಮಿತಿಯ ಕಾರ್ಯಸೂಚಿಯಲ್ಲಿ VB-G RAM G ಮಸೂದೆ ಮತ್ತು ಅದನ್ನು MNREGA ಜೊತೆ ಹೋಲಿಸುವ ಕು–ರಿತು ಗ್ರಾಮೀಣಾಭಿವೃದ್ಧಿ ಸಚಿವಾಲಯದ ಪ್ರಸ್ತುತಿ ಸೇರಿದೆ. ಕಾಂಗ್ರೆಸ್ ಸಂಸದ ಉಲಕ ಸಮಿತಿಯ ಅಧ್ಯಕ್ಷರಾಗಿದ್ದಾರೆ.

ಸಂಸತ್ತು ಅಂಗೀಕರಿಸಿದ್ದರೂ, ಮಸೂದೆ ಇನ್ನೂ ರಾಷ್ಟ್ರಪತಿಗಳ ಅನುಮೋದನೆಗಾಗಿ ಕಾಯುತ್ತಿದೆ ಮತ್ತು ಗೆಜೆಟ್ ಅಧಿಸೂಚನೆಯ ನಂತರವೇ ಕಾನೂನಾಗುತ್ತದೆ ಎಂದು ಬಿಜೆಪಿ ಸಂಸದರು ಆಕ್ಷೇಪಿಸುತ್ತಾರೆ.ಸಭೆಯಲ್ಲಿ ಬಿಜೆಪಿ ಸಂಸದರು ಕೋಪಗೊಂಡಿದ್ದೇಕೆ? ಟೈಮ್ಸ್ ಆಫ್ ಇಂಡಿಯಾ ವರದಿಯ ಪ್ರಕಾರ, ಸಮಿತಿಯ ಸದಸ್ಯ ಮತ್ತು ಬಿಜೆಪಿ ಸಂಸದ ವಿವೇಕ್ ಠಾಕೂರ್ ಈ ನಿರ್ಧಾರವನ್ನು ಪ್ರಶ್ನಿಸಿ, ಇದನ್ನು "ಚಿಂತನಶೀಲವಲ್ಲದ" ಎಂದು ಕರೆದರು. ರಾಷ್ಟ್ರಪತಿಗಳ ಒಪ್ಪಿಗೆ ಪಡೆಯುವವರೆಗೆ ಮಸೂದೆಯನ್ನು ಕಾನೂನೆಂದು ಪರಿಗಣಿಸಲಾಗುವುದಿಲ್ಲ ಎಂದು ಅವರು ಹೇಳಿದರು. ಸಮಿತಿಯು ಇತ್ತೀಚೆಗೆ ಸಂಸತ್ತು ಅಂಗೀಕ–ರಿಸಿದ ಮಸೂದೆಯನ್ನು ಚರ್ಚಿಸಲು ಸಾಧ್ಯವಿಲ್ಲ, ಆದರೆ ಅದರ ಅನುಷ್ಠಾನದ ಕುರಿತು ಪರಿಶೀಲಿಸಬಹುದು ಮತ್ತು ಶಿಫಾರಸುಗಳನ್ನು ಮಾಡಬಹುದು ಎಂದು ಇತರ ಬಿಜೆಪಿ ಸಂಸದರು ವಾದಿಸಿದರು. ಮಸೂದೆಯನ್ನು ಯುಪಿಎ ಕಾಲದ ಎಂಎನ್‌ಆರ್‌ಇಜಿಎ ಯೋಜನೆಗೆ ಹೋಲಿಸುವುದು ಈ ವಿಷಯದ ಉದ್ದೇಶಪೂರ್ವಕ ರಾಜಕೀಯೀಕರಣ ಎಂದು ಎನ್‌ಡಿಎ ಸದಸ್ಯರು ಆರೋಪಿಸಿದ್ದಾರೆ. ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳು ಈ ಹೊಸ ಕಾನೂನನ್ನು ಟೀಕಿಸುವಲ್ಲಿ ಒಗ್ಗಟ್ಟಾಗಿವೆ ಎಂದು ಅವರು ಹೇಳುತ್ತಾರೆ. ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಮಹಾತ್ಮ ಗಾಂಧಿಯವರ ಹೆಸರಿನಲ್ಲಿ ಜಾರಿಗೆ ತರಲಾಗುತ್ತಿದ್ದ ಹಳೆಯ ಕಾನೂನನ್ನು ಈ ಹೊಸ ಕಾನೂನು ಬದಲಾಯಿಸುತ್ತದೆ ಮತ್ತು ಈಗ ಯೋಜನೆಯ ಹೆಸರಿನಿಂದ ಗಾಂಧಿ–ಜಿಯವರ ಹೆಸರನ್ನು ತೆಗೆದುಹಾಕಲಾಗಿದೆ. ಸಂಸದೀಯ ಚರ್ಚೆಯ ಸಮಯದಲ್ಲಿ ಯಾವ ಬೇಡಿಕೆಯನ್ನು ಮಾಡಲಾಯಿತು,ಲೋಕಸಭೆಯಲ್ಲಿ ಮಸೂದೆಯ ಮೇಲಿನ ಚರ್ಚೆಯ ಸಮಯದಲ್ಲಿ, ಉಲಕಾ ಅವರು ಅದನ್ನು ತಮ್ಮ ಸಮಿತಿಗೆ ಉಲ್ಲೇಖಿಸಬೇಕೆಂದು ಒತ್ತಾಯಿಸಿದರು, ಆದರೆ ಅದನ್ನು ಸರ್ಕಾರ ತಿರಸ್ಕರಿಸಿತು ಎಂಬುದು ಗಮನಾರ್ಹ. ಈಗ, ಅವರು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆದು ಮಸೂದೆಯನ್ನು ಸಮಿತಿಗೆ ಉಲ್ಲೇಖಿಸುವಂತೆ ಒತ್ತಾಯಿಸಿದ್ದಾರೆ. ಎನ್‌ಡಿಎ ಸದಸ್ಯರು ಸಮಿತಿಯಲ್ಲಿ ತಮಗೆ ಬಹುಮತವಿದೆ ಮತ್ತು ಸ್ಪೀಕರ್‌ಗೆ ಲೋಕಸಭಾ ಸಮಿತಿಗಳ ಮೇಲೆ ವಿಶೇಷ ಅಧಿಕಾರವಿರುವುದರಿಂದ ಈ ವಿಷಯವನ್ನು ಸ್ಪೀಕರ್‌ಗೆ ತಿಳಿಸಲು ಪರಿಗಣಿಸುತ್ತಿದ್ದೇವೆ ಎಂದು ಹೇಳುತ್ತಾರೆ.ಈ ಸಮಿತಿಯ ಕಾರ್ಯಸೂಚಿ ವಿವಾದಾಸ್ಪದವಾಗಿರುವುದು ಇದೇ ಮೊದಲಲ್ಲ. ಜುಲೈ ಆರಂಭದಲ್ಲಿ, ಭೂಸ್ವಾಧೀನ ಕಾಯ್ದೆಯ ಅನುಷ್ಠಾನವನ್ನು ಪರಿಶೀಲಿಸಲು ನಡೆದ ಸಮಿತಿ ಸಭೆಗೆ ಸಾಮಾಜಿಕ ಕಾರ್ಯಕರ್ತೆ ಮೇಧಾ ಪಾಟ್ಕರ್ ಮತ್ತು ನಟ ಪ್ರಕಾಶ್ ರಾಜ್ ಅವರನ್ನು ಆಹ್ವಾನಿಸುವ ನಿರ್ಧಾರವನ್ನು ಬಿಜೆಪಿ ಸದಸ್ಯರು ತೀವ್ರವಾಗಿ ಪ್ರತಿಭಟಿಸಿದರು. ಮೇಧಾ ಪಾಟ್ಕರ್ ಅವರ ಉಪಸ್ಥಿತಿಯನ್ನು "ಅಭಿವೃದ್ಧಿ ವಿರೋಧಿ" ಎಂದು ಕರೆದ ಬಿಜೆಪಿ ಸಂಸದರು ಸಭೆಯಿಂದ ಹೊರನಡೆದರು, ಇದು ಸಭೆಯನ್ನು ಮುಕ್ತಾಯಗೊಳಿಸಲು ಕಾರಣವಾಯಿತು.

## ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮ



❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು ಡಿ 21 : ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಇಂದು ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಭಾರತಾಂಬೆಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದರ ಮುಖಾಂತರ ಪ್ರಾರಂಭ ಮಾಡಲಾಯಿತು ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದಂತ ಡಾ.ಮೇರಿ ಭಂಡಾರಿ ಮಗುವಿಗೆ ಪಲ್ಸ್ ಪೋಲಿಯೋ ಹಾಕುವ ಮುಖಾಂತರ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು, ಇದೇ ಸಂದರ್ಭದಲ್ಲಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಎಲ್ಲಾ ಸಿಬ್ಬಂದಿಗಳು ತಮಗೆ ನಿಯೋಜನೆಗೊಳಿಸಿರುವ ವಿವಿಧ ಭಾಗದ ಪಲ್ಸ್ ಪೋಲಿಯೋ ಬೂತ್ ಗಳಿಗೆ ವ್ಯಾಕ್ಸಿನ್ ಕ್ಯಾರಿ ತೆಗೆದುಕೊಂಡು ಅತ್ಯಂತ ಉತ್ಸಾಹದಿಂದ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ತೆರಳಿದರು ನಗರ ಪ್ರಾಥ–'ಮಿಕ ಆರೋಗ್ಯ ಕೇಂದ್ರದ ಜೊತೆ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ನ ಪ್ರಾಚಾರ್ಯರು ಮತ್ತು ವಿದ್ಯಾರ್ಥಿಗಳು ಸಹ ಭಾಗವಹಿಸಿ ತಮಗೆ ನಿಯೋಜಿಸಿರುವ ಪಲ್ಸ್ ಪೋಲಿಯೋ ಬೂತುಗಳಲ್ಲಿ ಆರೋಗ್ಯ ಸೇವಕರಾಗಿ ಕಾರ್ಯನಿರ್ವಹಿಸಿದರು ಇದೇ ಸಂದರ್ಭದಲ್ಲಿ ಹಿರಿಯ ಆರೋಗ್ಯ ಸಹಾಯಕರಾದಂತಹ ರಂಗನಾಥ್ ಹಾಗೂ ಪಲ್ಸ್ ಪೋಲಿಯೋ ಮೇಲ್ವಿಚಾರಕರಾದಂತ ಹನುಮಂತ ಮತ್ತು ನಗರ ಆರೋಗ್ಯ ಕೇಂದ್ರದ ಸಿಬ್ಬಂದಿಗಳು ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್, ಪ್ಯಾರಾಮೆಡಿಕಲ್ ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು.

## ಧಾರ್ಮಿಕ ಮುಖಂಡರಿಂದ ವಿಧಾನಸಭಾಧ್ಯಕ್ಷರ ಭೇಟಿ

❑ ನೈಜ್ಯ ದೆಸೆ ನ್ಯೂಸ್



ತಾಳಿಕೋಟಿ: ಕಲಬುರ್ಗಿ ನಗರದಲ್ಲಿ ಆಯೋಜಿಸಿದ ವಾರ್ತಾಭಾರತಿ ಕನ್ನಡ ದಿನಪತ್ರಿಕೆ ಕಲ್ಯಾಣ ಕರ್ನಾಟಕ ಆವೃತ್ತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಭಾಗವಹಿಸಲು ಆಗಮಿಸಿದ ಕರ್ನಾಟಕ ಸರ್ಕಾರದ ವಿಧಾನಸಭೆ ಸ್ಪೀಕರ್ ರಾದ ಸನ್ಮಾನ್ಯ ಶ್ರೀ ಯುಟಿ ಖಾದರ್ ಅವರನ್ನು ತಾಳಿಕೋಟಿ ಮುಸ್ಲಿಂ ಧಾರ್ಮಿಕ ಮುಖಂಡ ಸಯ್ಯದ್ ಶಕೀಲ್ ಅಹಮದ್ ಕಾಜಿ ಗೌರವಾನ್ವಿತ ಸಾಹೇಬರು ಭೇಟಿಯಾಗಿ ವಿಧಾನಸಭಾಧ್ಯಕ್ಷರಿಗೆ ಸತ್ಕರಿಸಿ ಗೌರವಿಸಿದರು.

## ವಿವೇಕ ಪಥ ರಾಷ್ಟ್ರದ ಹಿತ ಮಕ್ಕಳಲ್ಲಿ ನಾಡಿನ ಜವಾಬ್ದಾರಿಯ ಅರಿವು ಮೂಡಿಸುವ 5 ನೇ ಕಾರ್ಯಕ್ರಮ.

❑ ನೈಜ್ಯ ದೆಸೆ ನ್ಯೂಸ್



ಸಿಂಧನೂರು : ರಾಮಕೃಷ್ಣ ಆಶ್ರಮದ ವತಿಯಿಂದ ಡಿ 21 "ವಿವೇಕ ಪಥ ರಾಷ್ಟ್ರದ ಹಿತ " 5ನೇ ಕಾರ್ಯಕ್ರಮವನ್ನು ಸಿಂಧನೂರಿನ ಸರ್ವೋದಯ ಪ್ರಾಥ–'ಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಆಯೋಜಿಸಲಾಗಿತ್ತು.*ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಸಿಂಧನೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಪೂಜ್ಯ ಶ್ರೀ ಸ್ವಾಮಿ ಸದಾನಂದ ಮಹಾರಾಜ್ ರವರು ಅಗ್ನಿ ಅವಘಡದಿಂದಾಗುವ ಪರಿಣಾಮಗಳು & ಮುಂಜಾಗ್ರತ ಕ್ರಮಗಳ ಕುರಿತು ಮಾತನಾಡಿ, ವಿದ್ಯಾರ್ಥಿಗಳಿಗೆ ಅಧ್ಯಯನ, ಏಕಾಗ್ರತೆ ಬಗ್ಗೆ ತಿಳಿಸಿದರು..ಕಾರ್ಯಕ್ರಮದ ಉಪನ್ಯಾಸಕರಾದ ಶ್ರೀ ಮುನಿರೆಡ್ಡಿ, ಅಗ್ನಿ ಶಾಮಕರು, ಅಗ್ನಿಶಾಮಕ ಠಾಣೆ ಸಿಂಧನೂರು ಇವರು ಅಗ್ನಿ ಅವಘಡ & ಸುರಕ್ಷತಾ ಕ್ರಮಗಳು ವಿಷಯದ ಕುರಿತು ಅಗ್ನಿ ಅವಘಡಕ್ಕೆ ಕಾರಣಗಳು, ಪರಿಹಾರ ಕ್ರಮಗಳು, ಸುರಕ್ಷತಾ ಕ್ರಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅತ್ಯಪಯುಕ್ತ ಮಾಹಿತಿ ನೀಡಿದರು...ಕಾರ್ಯಕ್ರಮದಲ್ಲಿ ಶ್ರೀ ಚಿದಾನಂದಪ್ಪ, ಮು. ಗು. ಸರ್ವೋದಯ ಪ್ರೌಢ ಶಾಲೆ & ಶ್ರೀ ಪ್ರಭು, ಮು. ಗು. ಸರ್ವೋದಯ ಹ ಪ್ರಾಥಮಿಕ ಶಾಲೆ ಸಿಂಧನೂರು ಹಾಗೂ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು..

## ಪೋಲಿಯೋ ವಿರುದ್ಧ ನಿರಂತರ ವಿಜಯದ ಮುನ್ನಡೆಗೆ ನಿಮ್ಮ ಮಕ್ಕಳಿಗೆ ತಪ್ಪದೇ ಪೋಲಿಯೋ ಹಾಕಿಸಿ: ಚಂದ್ರು ಭೂಪಾಲ್ ನಾಡಗೌಡರು



❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು ಡಿಸೆಂಬರ್ 21: ಸಮೀಪದ ಜವಳಗೇರಾ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಅಂಗನವಾಡಿ ಕೇಂದ್ರ 3ನೇ ಕೇಂದ್ರದಲ್ಲಿ ಚಂದ್ರು ಭೂಪಾಲ್ ನಾಡಗೌಡರು ಮಕ್ಕಳಿಗೆ ಪೋಲಿ ಹನಿ ಹಾಕುವುದರ ಮೂಲಕ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.ನಂತರ ಮಾತನಾಡಿದ ಅವರು ಮಕ್ಕಳ ಉತ್ತಮ ಆರೋಗ್ಯಕ್ಕೆ ತಪ್ಪದೇ ಎರಡು ಹನಿ ಪೋಲಿಯೋ ಹಾಕುವ ಮೂಲಕ ಮಕ್ಕಳಲ್ಲಿ ಅಂಗವಿಕಲತೆ ಬರದಂತೆ ತಡೆಗಟ್ಟಬಹುದು ಪೋಲಿಯೋ ವಿರುದ್ಧ ಭಾರತ ವಿಜಯ ಸಾಧಿಸಿದ್ದರು. ಪಕ್ಕದ ರಾಷ್ಟ್ರಗಳಲ್ಲಿ ಪೋಲಿಯೋ ಪ್ರಕರಣ ಇರುವುದರಿಂದ ಮುಂಜಾಗ್ರತಾ ಕ್ರಮವಾಗಿ ತಪ್ಪದೇ ನಿಮ್ಮ ಮಕ್ಕಳಿಗೆ ಪೋಲಿಯೋ ಹನಿ ಹಾಕಿಸಬೇಕು ಎಂದರು. ಡಾಕ್ಟರ ಉಮೇಮಾ ಅಮೇರಾ ವೈದ್ಯಾಧಿಕಾರಿಗಳು ಅವರು ಮಾತನಾಡಿ ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೆರೆ ವ್ಯಾಪ್ತಿಯ ಎಲ್ಲಾ ಹಳ್ಳಿಗಳ 3199 ಮಕ್ಕಳಿಗೆ ಪೋಲಿಯೋ ಹನಿಗುರಿಯನ್ನು ಹೊಂದಲಾಗಿದೆ ದಿನಾಂಕ ಡಿಸೆಂಬರ್ 21 ರಿಂದ 24ರ ವರೆಗೆ ಪಲ್ಸ್ ಪೋಲಿಯೋ ಕಾರ್ಯಕ್ರಮ ನೆಡೆಯುತ್ತಿದ್ದು ನೂರಕ್ಕೆ ನೂರರಷ್ಟು ಎಲ್ಲಾ ಮಕ್ಕಳಿಗೆ ಲಸಿಕೆಯನ್ನು ಹಾಕುವ ಗುರಿಯನ್ನು ಹೊಂದಲಾಗಿದೆ ಎಂದರು.ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ ಸದಸ್ಯರು ಸುನಂದಮ್ಮ ,ಎಂ ಚಂದ್ರಶೇಖರ ವಿರುಪಾಕ್ಷಿ ಹಟ್ಟಿ ಗಂಗಣ್ಣ ಹಿರೇ ಕುರುಬರ ಯಲ್ಲಪ್ಪ ಜಾನೇಕಲ್ ರೇವಣ್ಣ ಸಂಗಟಿ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಆರೋಗ್ಯ ನಿರೀಕ್ಷಣಾ ಅಧಿಕಾ–ರಿಗಳಾದ ಉದಯ ಕುಮಾರ , ಮಹೇಶ ,ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿಗಳು ರಾಧಾ ಕೊಂಡಿ ಅಂಗನವಾಡಿ ಕಾರ್ಯಕರ್ತರಾದ ಇಂದ್ರಮ್ಮ, ದುರ್ಗಮ್ಮ ಆಶಾ ಕಾರ್ಯಕರ್ತರಾದ ಮಲ್ಲಮ್ಮ ಉಪಸ್ಥಿತ–ರಿದ್ದರು

## ರಾಷ್ಟ್ರೀಯ ಪಲ್ಸ ಪೋಲಿಯೊ ಕಾರ್ಯಕ್ರಮ 5ವರ್ಷದ ವರೆಗಿನ ಮಕ್ಕಳಿಗೆ 2 ಹನಿ ಪೋಲಿಯೊ ಹಾಕಿಸಿ: ಬಸವನಗೌಡ ಬಾದರ್ಲಿ





❑ ನೈಜ್ಯ ದೆಸೆ ನ್ಯೂಸ್

ಸಿಂಧನೂರ: ಡಿ.21: ತಾಲೂಕು ಸಾರ್ವಜನಿಕ ಆಸ್ಪತ್ರೆ ಸಿಂಧನೂರು, ನಲ್ಲಿ ಡಿಸೇಂಬರ್ 21 ರಿಂದ 24 ವರೆಗೆ ನಡೆಯುವ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಬೂತ ಮಟ್ಟದ ಉದ್ಘಾಟನಾ ಕಾರ್ಯಕ್ರಮವನ್ನು ಸನ್ಮಾನ್ಯ ಶ್ರೀ ಬಸನಗೌಡ ಬಾದರ್ಲಿ , ಶಾಸಕರು ವಿಧಾನಪ–ರಿಷತ್ , ಸಿಂಧನೂರು, ಸಸಿಗೆ ನೀರೆರೆಯುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು ಮತ್ತು ಹಾಜ–ರಿದ್ದ 5 ವರ್ಷದೊಳಗಿನ ಮಕ್ಕಳಿಗೆ 2 ಹನಿ ಪೋಲಿಯೊ ಲಸಿಕೆ ನೀಡಿ ಮಾತನಾಡುತ್ತಾ ದೇಶವು ಈಗಾಗಲೆ ಕಳೆದ ಹಲವು ವರ್ಷಗಳಿಂದ ಭಾರತವು ಪೋಲಿಯೊ ರೋಗದಿಂದ ಮುಕ್ತವಾಗಿದೆ ನೆರೆಯ ದೇಶಗಳಲ್ಲಿ ಇದರ ಹಾವಳಿ ಹೆಚ್ಚಾಗಿದ್ದು ವಲಸಿಗ ಪ್ರಕರಣಗಳು ಬಾರದಂತೆ ನಿಗಾವಹಿಸಲು ಮತ್ತು ನಿಯಂತ್ರಣಕ್ಕಾಗಿ ನಮ್ಮ ಭಾರತ ದೇಶ ಲಸಿಕೆ ಒದಗಿಸಲು ಮುಂದಾಗುತ್ತಿರುವುದು ಮತ್ತು ರಾಷ್ಟ್ರೀಯ ಪಲ್ಸ ಪೋಲಿಯೊ ಕಾರ್ಯಕ್ರಮ ಮಾಡುತ್ತಿರುವುದು ಹೆಮ್ಮೆಯ ವಿಷಯ ಕಾರಣ ಪ್ರತಿ ವರ್ಷದಂತೆ ಈ ವರ್ಷವೂ ಬಹಳ ಅಚ್ಚುಕಟ್ಟಾಗಿ ನಿರ್ವಹಣೆಗೆ ಆರೋಗ್ಯ ಇಲಾಖೆ ಪಲ್ಸಪೋಲಿಯೊ ಕಾರ್ಯಕ್ರಮ ಆಯೋಜನೆಗೆ ಮುಂದಾಗಿದ್ದು ಇದರ ಗುರಿಯ ಆಶಯದಂತೆ 90% ಶೇಕಡಾ ಗುರಿ ಬೂತ ಮಟ್ಟದ ದಿನದಂದು ಪೂರ್ಣಗೊಳಿಸಲು ಸಾರ್ವಜನಿಕರು ಮನೆಯಲ್ಲಿನ ಮತ್ತು ಸುತ್ತಮುತ್ತಲಿನ 5ವರ್ಷದೊಳಗಿನ ಮಕ್ಕಳನ್ನು ಸ್ವಯಂಪ್ರೇರಿತವಾಗಿ ಬೂತಗಳಿಗೆ ಕರೆತಂದು ಲಸಿಕೆ ಹಾಕಿಸಲು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಡಾ॥ಅಯ್ಯನಗೌಡ ತಾಲೂಕ ಆರೋಗ್ಯ ಅಧಿಕಾ–ರಿಗಳು ಡಾ॥ ನಾಗರಾಜ್ ಕಾಟ್ವಾ ಆಡಳಿತ ವೈದ್ಯಾಧಿಕಾ–ರಿಗಳು ತಾಯಿ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ಡಾ॥ ಸುರೇಶ್ ಗೌಡ ಸಾರ್ವಜನಿಕ ಆಸ್ಪತ್ರೆ ಮುಖ್ಯ ಆಡಳಿತ ವೈದ್ಯಾಧಿಕಾರಿಗಳು, ತಾಲೂಕು ಆಸ್ಪತ್ರೆ ಮಕ್ಕಳ ತಜ್ಞೆ ಡಾ.ಶ್ರತಿ, ಡಾ.ಮಂಜುನಾಥ ಅಣ್ಣಾಗೌಡ,ಯುನಾನಿ ಆಸ್ಪತ್ರೆಯ ವೈದ್ಯರಾದ ಡಾ.ಅಮ್ಜದ್ ಷರೀಫ್ ,ಸ್ಟಾಫ್ ನರ್ಸ ಗುರುಶಾಂತಮ್ಮ,ತೇಜಾ, ಈ ಹಸ್ಪಿಟಲ್ ನ ಡಿ.ಈ.ಓ ಶರಣಬಸವ,ಎನ್.ಸಿ.ಡಿ ಕಾರ್ಯಕ್ರಮ ಸುವರ್ಣಮ್ಮ ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಲಯದ ಹಿರಿಯ.ಆರೋಗ್ಯ ಸಹಾಯಕರಾದ ರಂಗನಾಥ ಗುಡಿ,ಸಂಗನಗೌಡ,ತಾಲೂಕಾ ಮೇಲ್ವಿಚಾರಕ ಎಫ್.ಎ.ಹಣಗಿ,ಬಿ.ಹೆಚ್.ಈ ಗೀತಾ ಹಿರೆಮಠ,ಆರ್.ಕೆ. ಎಸ್.ಕೆ ಕೌನ್ಸ್ಲರ್ ರಾಮಾಂಜನೆಯ,ಕೆಸೆಪ್ ನ ಕೌನ್ಸ್ಲರ್ ಅಂಬ್ರೇಶ.ಹಿರೆಮಠ ಹಾಗೂ ಎಲ್ಲಾ ಸಿಬ್ಬಂದಿಗಳು ಹಾಜ–ರಿದ್ದರು ಎಂ.ಬಿ.ಕಾಲೋನಿಯ ಆಶಾ ಕಾರ್ಯಕರ್ತೆಯರಾದ ಮಾಲನಬಿ, ಕಸ್ತೂರಿ ಮತ್ತು ಆಶಾ.ಕಾ.ಕರ್ತೆಯರ ಬಳಗ ಮತ್ತು ಸಾರ್ವಜನಿಕರು ಸಾಥನೀಡಿದರು

## ಸಾಹಿತ್ಯ ಸಿಂಚನ

ಗಝಲ್

ಏರಿರಲು ಹಯವ ಗುರಿಮುಟ್ಟುವ
ತನಕ ಸಾಗುತಿರು ನೀನು
ಕಾರಿರುಳು ಭಯವ ಲೆಕ್ಕಿಸದೆ ಛಲವ
ಬಿಡದೆ ಹೋಗುತಿರು ನೀನು

ಆಡಿದ ಮಾತುಗಳಿಗೆ ಕಿವಿಗೊಡದೆ
ಸುಮ್ಮನೆ ನಡೆಯಬೇಕಲ್ಲವೇ
ಕಾಡಿದ ಒಲವ ನೆನಪುಗಳ ಜೊತೆ
ಖುಷಿಯಿಂದ ಬೀಗುತಿರು ನೀನು

ಮಾಡಿದ ತ್ಯಾಗಕ್ಕೆ ಪ್ರತಿಫಲವಾಗಿ
ಶುಭದಿನಗಳು ಕಾದಿರಬಹುದು
ಹಾಡಿದ ಕೋಗಿಲೆಯ ದನಿ ಕೇಳಿ
ತಲೆ ತೂಗುತಿರು ನೀನು

ಕನಸುಗಳು ನನಸಾಗದು ಎಂದು
ಕೊರಗುವುದು ತರವಲ್ಲ
ಮನಸ್ಸಿನ ಚಿಂತೆಗಳ ಕೊಂದು ಒಮ್ಮೆ
ನೆಮ್ಮದಿಯಾಗಿ ನಗುತಿರು ನೀನು

ಸೂರ್ಯ ಮುಳುಗಿದರು ಮರುದಿನ
ಹೊಸತನ ಹೊತ್ತು ತರುವನು 'ಕವಿ'
ಆರ್ಯನ ನಿರೀಕ್ಷೆಯಲ್ಲಿ ಕವಿತೆಯ
ಪದವಾಗಲು ಬಾಗುತಿರು ನೀನು

–ಶ್ರೀಮತಿ ಕವಿತಾ ಹಿರೇಮಠ ಕವಿತಾಳ

## ಚಿತ್ರಕಲೆಯಲ್ಲಿ ಪ್ರಥಮ ಸ್ಥಾನ ಪಡೆದ ಸಂಗಮೇಶ

❑ ನೈಜ್ಯ ದೆಸೆ ನ್ಯೂಸ್



ಕೊಡೆಕಲ್ಲ: ಗ್ರಾಮದ ಪ್ರತಿಷ್ಠಿತ ವಿದ್ಯಾ ಸಂಸ್ಥೆಯಾದ ಆರ್.ಟಿ.ಜೆ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಜರುಗಿದ ಚಿತ್ರಕಲಾ ಸ್ಪರ್ಧೆಯಲ್ಲಿ ಕೊಡೆಕಲ್ ಪ್ರಾಥ-'ಮಿಕ ಆರೋಗ್ಯ ಕೇಂದ್ರಲ್ಲಿ ಆರೋಗ್ಯ ನಿರಕ್ಷಣಾಧಿಕಾರಿಗಳಾದ ಶ್ರೀರಾಮಚಂದ್ರ ಮುಚ್ಚಟ್ಟಿರವರ ಕಿರಿಯ ಮಗ ಎಂಟನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿ ಸಂಗಮೇಶ ಮುಚ್ಚಟ್ಟಿ ಅವರು ಪ್ರಥಮ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಈ ಸಂದರ್ಭದಲ್ಲಿ ಮುಖ್ಯ ಗುರುಗಳಾದ ಶ್ರೀನಿವಾಸ್ ಮಡ್ಡಿರವರು ಮಾತನಾಡಿ ಬೆಳೆಯುತ್ತಿರುವ ಇಂತಹ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಇಂದು ನಾವು ಗುರುತಿಸುವ ಅವಶ್ಯಕತೆ ಇದೆ. ಇವನು ತನ್ನ ಈ ಉತ್ತಮ ಸಾಧನೆಯಿಂದ ನಮ್ಮ ಶಾಲೆಗೆ ಕೀರ್ತಿ ತಂದಿದ್ದಾನೆ. ನಮ್ಮ ಶಾಲೆಯಲ್ಲಿ ಇಂಥಹ ವಿದ್ಯಾರ್ಥಿಗಳನ್ನು ಗುರುತಿಸಿ ಅವರವರ ಪ್ರತಿಭೆಗಳಿಗೆ ತಕ್ಕಂತೆ ಶೈಕ್ಷಣಿಕ ಸ್ಪರ್ಧೆಗಳು ಪ್ರತಿ ವರ್ಷ ಏರ್ಪಾಡು ಮಾಡುತ್ತೇವೆ ಎಂದರು. ವಿದ್ಯಾರ್ಥಿ ಸಂಗಮೇಶ ಮುಚ್ಚಟ್ಟಿ ರವರ ಈ ಸಾಧನೆಯ ಹಿಂದೆ ನಮ್ಮ ಶಾಲೆಯ ಚಿತ್ರಕಲಾ ಶಿಕ್ಷಕರಾದ ಶ್ರೀ ಮಂಜುನಾಥ ಅಂಕಲಗಿ ರವರ ತರಬೇತಿಗೆ ತಕ್ಕ ಫಲ ಲಭಿಸಿದೆ ಎಂದು ಶ್ಲಾಘನೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಆರ್ ಟಿ ಜೆ ಆಂಗ್ಲ ಮಾಧ್ಯಮ ಶಾಲೆಯ ಎಲ್ಲಾ ಸಿಬ್ಬಂದಿ ವರ್ಗದವರು ವಿದ್ಯಾರ್ಥಿ ವಿದ್ಯಾರ್ಥಿನಿಯರು ಪಾಲಕರು ಉಪಸ್ಥಿರದಿದ್ದರು. ಪ್ರಾಥಮಿಕ ಆರೋಗ್ಯ ಕೇಂದ್ರ ಕೊಡೇಕಲ್ಲಿನ ಎಲ್ಲಾ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಯ ಸಾಧನೆ ಕಂಡು ಹರ್ಷ ವ್ಯಕ್ತಪಡಿಸಿದರು.

## ಪೋಲಿಯೋ ಮುಕ್ತ ಭಾರತಕ್ಕೆ ಪೋಲಿಯೋ ಲಸಿಕೆ ಹಾಕಿಸುವುದು ಅವಶ್ಯವಾಗಿದೆ : ಅಶೋಕ್ ನಲ್ಲಾ

❑ ನೈಜ್ಯ ದೆಸೆ ನ್ಯೂಸ್



ಸಿಂಧನೂರು ತಾಲೂಕಿನ ಹೊಸಳ್ಳಿ ಇಜೆ ಕ್ಯಾಂಪ್ ಶ್ರೀ ರಾಮಮಂದಿರ ಹತ್ತಿರ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ರವಿವಾರ ಬೆಳಿಗ್ಗೆ ಮಗುವಿಗೆ ಪೋಲಿಯೋ ಲಸಿಕೆ ಹಾಕಿ ಚಾಲನೆ ನೀಡಲಾಯಿತು.ಈ ಸಮಯದಲ್ಲಿ ಮಾತನಾಡಿದ ಅಕ್ಷಯ ಆಹಾರ ಜೋಳಿಗೆ ಸೇವಾ ಟ್ರಸ್ಟ್ ಕಾರ್ಯದರ್ಶಿ ಅಶೋಕ್ ನಲ್ಲಾ ಮಾತನಾಡಿ, ಇಂದಿನಿಂದ 4ದಿನಗಳವರೆಗೆ ನಡೆಯುವ ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನ ಆರಂಭವಾಗಿದೆ. ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಲಸಿಕೆ ಹಾಕಿಸುವಂತೆ ಪೊಷಕರಲ್ಲಿ ಮನವಿ ಮಾಡುತ್ತಿದ್ದೇನೆ ಎಂದರು. ಈ ಸಮಯದಲ್ಲಿ ಅಂಗನವಾಡಿ ಸಿಬ್ಬಂದಿಗಳು ಇದ್ದರು

# ಸಿಂಧನೂರು ತಾಲೂಕ ಬ್ರಾಹ್ಮಣ ಸಮಾಜದಿಂದ ಹನುಮೇಶ ಜಾಹಗೀರದಾರ್‌ಗೆ ಸನ್ಮಾನ

❑ ನೈಜ್ಯ ದೆಸೆ ನ್ಯೂಸ್



ಸಿಂಧನೂರು ನಗರದ ಬ್ರಾಹ್ಮಣರ ಓಣಿಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಜಿಲ್ಲಾ ಯುವ ಸಮಿತಿ ಸಂಚಾಲಕರಾಗಿ ನೇಮಕರಾದ ಹನುಮೇಶ ಜಾಗೀರದಾರ ಅವ-ರಿಗೆ ಸಿಂಧನೂರು ತಾಲೂಕ ಬ್ರಾಹ್ಮಣ ಸಮಾಜ ಮತ್ತು ಗಜಾಜನ ಹವ್ಯಾಸ ಯುವಕ ಮಂಡಳಿ ಸಿಂಧನೂರು ವತಿಯಿಂದ ಅಭಿನಂದನಾ ಕಾರ್ಯಕ್ರಮ ನಡೆಯಿತು.ಈ ಕಾರ್ಯಕ್ರಮದಲ್ಲಿ ಮುಖ್ಯ ಉಪಸ್ಥಿತಿವಹಿಸಿದ್ದ ವೇದಮೂರ್ತಿ ರಾಮಕೃಷ್ಣಾಚಾರ್ಯ ಗೋನವಾರ ಮಾತನಾಡಿದ ಹನುಮೇಶ ಜಾಹಗೀರದಾರ್ ಸಿಂಧನೂರಿನ ಬ್ರಾಹ್ಮಣ ಸಮಾಜದ ಯುವ ಮುಖಂಡರಾಗಿ ಸಮಾಜಕ್ಕೆ ಸಲ್ಲಿಸಿದ ಸೇವೆ ಮತ್ತು ಅವರ ಸಮಾಜದ ಬಗೆಗಿನ ಕಾಳಜಿಯನ್ನು ಗುರುತಿಸಿ ಬ್ರಾಹ್ಮಣ ಮಹಾಸಭಾದ ರಾಜ್ಯ ಅಧ್ಯಕ್ಷರಾದ ಎಸ್ ರಘುನಾಥ ಅವರು ರಾಯಚೂರ ಜಿಲ್ಲಾ ಯುವ ಸಮಿತಿ ಸಂಚಾಲಕರಾಗಿ ನೇಮಕ ಮಾಡಿದ್ದು ಅಭಿನಂದನೀಯ ಎಂದರು.ಹಿರಿಯ ಪತ್ರಕರ್ತ ಮತ್ತು ವಕೀಲರಾದ ಪ್ರಲ್ಹಾದಗುಡಿಯವರು ಮಾತನಾಡಿ ಸಹೋದರ ಸಮನಾದ ಹನುಮೇಶ ಜಾಹಗೀರದಾರ್ ಅವರು ನಮ್ಮ ಸಮಾಜದ ಕ್ರೀಯಾಶೀಲ ಮುಖಂಡರಾಗಿ ಸಿಂಧನೂರಿನ ಬ್ರಾಹ್ಮಣ ಸಮಾಜದ ಪರವಾಗಿ ಸದಸ್ಯತ್ವ ಅಭಿಯಾನ ಮಾಡಿಸುವಲ್ಲಿ ಹೆಚ್ಚು ಶ್ರಮವಹಿಸಿದ್ದರು ಮತ್ತು ಈ ಸದಸ್ಯತ್ವ ಅಭಿಯಾನದಿಂದ ರಾಜ್ಯ ಮತ್ತು ಜಿಲ್ಲಾ ಮಟ್ಟದ ಮುಖಂಡದ ಗಮನಸೆಳೆದರು ಎಂದು ಅಭಿನಂದಿಸಿದರು.ಇದೆ ರೀತಿ ಪಂಡಿತ ರಂಗನಾಥ ಆಚಾರ್ಯ ಸಾಲಗುಂದ, ಮಾಜಿ ನಗರಸಭೆ ಸದಸ್ಯರಾದ ವೆಂಕಟರಾವ ಬಂಡಿ ವಕೀಲ, ಗುಂಡುರಾವ್ ಚೆನ್ನಳ್ಳಿ, ತಾಲೂಕು ಬ್ರಾಹ್ಮಣ ಸಮಾಜದ ಅಧ್ಯಕ್ಷರಾದ ಗೋವಿಂದರಾವ್ ಕುಲಕರ್ಣಿ ಮಾತನಾಡಿದರು. ಶಿಕ್ಷಕ ಕೃಷ್ಣ ಮೂರ್ಲ್ಕಿ ಸಮುದ್ರ ನಿರೂಪಿಸಿದರು.ನಂತರ ಇದೇ ಸಮಯದಲ್ಲಿ ಜಾಗೀರದಾರ ಕುಟುಂಬದಿಂದ ತಾಲೂಕು ಬ್ರಾಹ್ಮಣ ಸಮಾಜದ ಗುರುಗಳು,ಹಿ-ರಿಯ,ಮುಖಂಡರುಗಳಿಗೆ ಸನ್ಮಾನಿಸಿ ನೆನಪಿನ ಕಾಣಿಕೆ ನೀಡಲಾಯಿತು.ಈ ಸಂದರ್ಭದಲ್ಲಿ ಗಜಾನನ ಯುವಕ ಮಂಡಲದ ಅಧ್ಯಕ್ಷ ರಾಘವೇಂದ್ರಾಚಾರ್ ಮಸ್ಕಿ, ಪರಶುರಾಮದಳದ ಅವಿನಾಶ ಬಂಡಿ, ರಾಘವೇಂದ್ರ ಸ್ವಾಮಿಗಳ ಮಠದ ವಿಚಾರಣಾಕರ್ತ ರಾಘವೇಂದ್ರರಾವ್ ಕುಲ್ಕರ್ಣಿ, ವೆಂಕಟೇಶ ಸಿದ್ರಾಂಪುರ, ಪ್ರಲ್ಹಾದ ಕುಲ್ಕರ್ಣಿ, ಗುರುರಾಜ ಆಲದಾಳ, ಪ್ರಭಾಕರ ದೇಶಪಾಂಡೆ, ರಾಘವೇಂದ್ರ ಸಾಸವಿಹಾಳ ಸೇ-ರಿದಂತೆ ಜಾಗೀರದಾರ ಕುಟುಂಬದವರು ಇದ್ದರು.

# ಮೈಲಾಪುರ ಗ್ರಾಮದಲ್ಲಿ ಅಂಚೆ ಜನ ಸಂಪರ್ಕ ಅಭಿಯಾನ ಕಾರ್ಯಕ್ರಮ ಅಂಚೆ ಸಹಾಯಕರು ವೆಂಕಟೇಶ್ವರ



❑ ನೈಜ್ಯ ದೆಸೆ ನ್ಯೂಸ್

ಕಾರಟಗಿ: ತಾಲೂಕಿನ ಮೈಲಾಪುರ್ ಗ್ರಾಮದಲ್ಲಿ ಬಹಳ ವರ್ಷಗಳ ಇತಿಹಾಸ ಹೊಂದಿರುವ ಅಂಚೆ ಇಲಾಖೆ ಇಂದಿಗೂ ಜನರ ವಿಶ್ವಾಸ ಉಳಿಸಿಕೊಂಡ ಸಾಧನೆ ಮಾಡುತ್ತಿರುವುದು ಸ್ಥಾಪನೆಯ ಎಂದು ಅಂಚೆ ಸಹಾಯಕರು ವೆಂಕಟೇಶ್ವರ ರವರು ತಿಳಿಸಿದರು ಮೈಲಾಪುರ ಗ್ರಾಮದ ಅಂಚೆ ಕಚೇರಿಯಲ್ಲಿ ಶನಿವಾರ ಆಯೋಜಿಸಿದ ಅಂಚೆ ಜನ ಸಂಪರ್ಕ ಅಭಿಯಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು ಅಂಚೆ ಇಲಾಖೆಯ ಮಾರುಕಟ್ಟೆ ನಿರ್ವಾಹಕರಾದ ಮಲ್ಲಿಕಾರ್ಜುನನವರು ಜನರಲ್ಲಿ ಹಣಕಾಸು ಭದ್ರತೆ ಮತ್ತು ಭವಿಷ್ಯ ಯೋಜನೆಯ ಅರಿವು ಮೂಡಿಸುವ ಉದ್ದೇಶದಿಂದ ಅಂಚೆ ಇಲಾಖೆಯ ಉಳಿತಾಯ ಹಾಗೂ ವಿಮಾ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು .ಇಂದು ಡಿಜಿಟಲ್ ಯುಗದಲ್ಲಿಯೂ ಸಹ ಅಂಚೆ ಇಲಾಖೆ ವಿಶ್ವಾಸಾರ್ಹ ಸೇವೆಗಳ ಮೂಲಕ ಜನರ ಬದುಕಿಗೆ ಸಂಪರ್ಕ ಕಲ್ಪಿಸುತ್ತಾ ಆರ್ಥಿಕ ಸಾಮಾಜಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಬಗ್ಗೆ ಗುಂಡೂರು ಸರಕಾರಿ ಶಾಲಾ ಮುಖ್ಯ ಶಿಕ್ಷಕರಾದ ಮಲ್ಲಿಕಾರ್ಜುನ ಪಾಟೀಲ್ ಗುರುಗಳು ತಿಳಿಸಿದರು. ಕಾರಟಗಿ ಅಂಚೆ ಕಚೇರಿಯ ಪೋಸ್ಟ್ ಮಾಸ್ಟರ್ ಪರಿಮಳ ಪಾಟೀಲ್ ರವರು ಅಂಚೆ ಮಾರುಕಟ್ಟೆ ನಿರ್ವಾಹಕರು ಮಲ್ಲಿಕಾರ್ಜುನರವರು ಬ್ರಾಂಚ್ ಪೋಸ್ಟ್ ಮಾಸ್ಟರ್ ಪಲ್ಲವಿ ಕೊಂಗವಾಡ ಹಿರೇಮಠ ಅವರು ಅಂಚೆ ಇಲಾಖೆಯ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು ಸೊಸೈಟಿ ಕಾರ್ಯದರ್ಶಿ ಶಿವರಾಜ್ ಅವರು ದೊಡ್ಡಪ್ಪ ಮುಕ್ಕುಂದಿ ಮನೋಹರ್ ಬಡಿಗೇರ್ ಪಂಪಣ್ಣ ಬಡಿಗೇರ್ ಹನುಮಂತ ಬಡಿಗೇರ್ ವೀರನಗೌಡ ಚೇರ್ಮನ್ ಅಮರೇಗೌಡ ಮಾಲಿಪಾಟೀಲ್ ಸಿದ್ದಲಿಂಗಯ್ಯ ಸ್ವಾಮಿ ಹಿರೇಮಠ ಅವರು ಮತ್ತು ಊರಿನ ಎಲ್ಲಾ ಗ್ರಾಮಸ್ಥರು ಮತ್ತು ಎಲ್ಲಾ ಶಾಖೆ ಅಂಚೆ ಅಧಿಕಾರಿಗಳು ಭಾಗವಹಿಸಿದರು ಮತ್ತು ಅಂಚೆ ಕಚೇರಿಯ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು

# ಬಸ್ ನಿಲ್ದಾಣದಲ್ಲಿ ಪೋಲಿಯೋ ಲಸಿಕೆ – ಕೊಡೇಕಲ್

❑ ನೈಜ್ಯ ದೆಸೆ ನ್ಯೂಸ್





ಕೊಡೇಕಲ್: ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಪ್ರಯುಕ್ತ ಕೊಡೆಕಲ್ ಬಸ್ ನಿಲ್ದಾಣದಲ್ಲಿ ಕೊಡೇಕಲ್ ಪ್ರಾಥ-'ಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಡಾ" ಸಂ-ಜಯ ರವರು ಮಕ್ಕಳನ್ನು ಪೋಲಿಯೋ ಲಸಿಕೆಯನ್ನು ಹಾಕುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಆರೋಗ್ಯ ನಿರಕ್ಷಣಾಧಿಕಾರಿಗಳಾದ ಶ್ರೀ ಮುಜಾಹಿದ್ ನಮಾಜಕಟ್ಟಿ ಮಾತನಾಡಿ ಕೊಡೆಕಲ್ ಪ್ರಾಥ-'ಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬಸ್ ನಿಲ್ದಾಣಗಳಲ್ಲಿಯೂ ಪಲ್ಸ್ ಪೋಲಿಯೋ ಬೂತ್ ಅನ್ನು ನಿರ್ಮಿಸಲಾಗಿದೆ ಇದರ ಮೂಲ ಉದ್ದೇಶ ಯಾವುದೇ ಮಗು ಪೋಲಿಯೋದಿಂದ ವಂಚಿತವಾಗಬಾರದು ಎಂಬುದಾಗಿದೆ. ನಾಳೆಯಿಂದ ಪ್ರತಿ ಮನೆ ಮನೆಗೆ ತೆರಳಿ ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪೋಲಿಯೋ ಲಸಿಕೆಯನ್ನು ನೀಡಲಾಗುತ್ತದೆ. ಈ ಕಾರ್ಯಕ್ರಮವು ರಾಷ್ಟ್ರೀಯ ಕಾರ್ಯಕ್ರಮವಾಗಿದ್ದು ಇಂದಿನಿಂದ 24ನೇ ಡಿಸೆಂಬರ್ ವರೆಗೂ ನಡೆಯಲಿದೆ ಎಂದರು. ನೆರೆಯ ರಾಷ್ಟ್ರಗಳಲ್ಲಿ ಪೋಲಿಯೋ ಲಕ್ಷಣಗಳು ಕಂಡುಬಂದಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ಪ್ರತಿಯೊಬ್ಬರೂ ತಮ್ಮ ಐದು ವರ್ಷದೊಳಗಿನ ಮಕ್ಕಳಿಗೆ ಪೋಲಿಯೋ ಲಸಿಕೆಯನ್ನು ಹಾಕಿ ಸುವುದರ ಮುಖಾಂತರ ಪೋಲಿಯೋ ಮುಕ್ತ ರಾಷ್ಟ್ರವನ್ನಾಗಿ ಸಹಕ-ರಿಸಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ವೈದ್ಯರಾದ ಡಾ"ಗೌತಮ ಕುಲಕರ್ಣಿ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾ-ರಿಗಳಾದ ಶ್ರೀ ಚನ್ನಬಸಪ್ಪ ನಾಲತವಾಡ ಶುಶ್ರೂಷಣಾಧಿಕಾ-ರಿಗಳಾದ ಶ್ರೀಮತಿ ಬಾಲಮ್ಮ , ಆರೋಗ್ಯ ನಿರೀಕ್ಷಣಾಧಿಕಾ-ರಿಗಳಾದ ಶ್ರೀರಾಮಚಂದ್ರ ಮುಚ್ಚಟ್ಟಿ , ಮೇಲ್ವಿಚಾರಣಾ ಅಧಿಕಾರಿಗಳಾದ ಶ್ರೀ ಸತೀಶ್ , ಗಣ್ಯರಾದ ಶ್ರೀ ಅರುಣ್ ಪಾಟೀಲ್, ಸಂಗನಗೌಡ ಪಾಟೀಲ್ ಕಾರ್ಯನಿರ್ವಾಹಕರಾದ ಶ್ರೀ ಶ್ರೀಕಾಂತ ಬಡಿಗೇರ್ ಶಿಕ್ಷಕಿಯರಾದ ರೇಖಾ ಎಸ್ ಕೊಡೆಕಲ್ ಮಠ ಹಾಗೂ ಇತರರು ಉಪಸ್ಥಿತರಿದ್ದರು.

# ಯೋಗ ಸನ್ನಿಧಿ ಜ್ಞಾನ ವಿದ್ಯಾಪೀಠ ಟ್ರಸ್ಟ್‌ನಿಂದ 21 ದಿನಗಳ ಉಚಿತ ಯೋಗ-ಧ್ಯಾನ ಶಿಬಿರ ಯಶಸ್ವಿ



❑ ನೈಜ್ಯ ದೆಸೆ ನ್ಯೂಸ್

ಮಾನ್ವಿ : ಯೋಗ ಸನ್ನಿಧಿ ಜ್ಞಾನ ವಿದ್ಯಾಪೀಠ ಟ್ರಸ್ಟ್ ವತಿಯಿಂದ ಮಾನ್ವಿ ತಾಲೂಕಿನ ಸರಕಾರಿ ಹಾಗೂ ಖಾಸಗಿ ಶಾಲೆಗಳು ಹಾಗೂ ವಿವಿಧ ಸಂಘ ಸಂಸ್ಥೆಗಳಲ್ಲಿ 21 ದಿನಗಳ ಕಾಲ ಉಚಿತ ಯೋಗಭ್ಯಾಸವನ್ನು ನಡೆಸಲಾಯಿತು. ಶಿಬಿರದ ಅಂಗವಾಗಿ ಧ್ಯಾನ ದಿನಾಚರಣೆಯ ಮಹತ್ವ ಕುರಿತು ಚರ್ಚೆಗಳು ನಡೆಯಿತು.ಈ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದ ತಾಲೂಕು ದಂಡಾಧಿಕಾರಿಗಳಾದ ಭೀಮರಾಯ ರಾಮಸಮುದ್ರ ಅನಿವಾರ್ಯ ಕಾರಣಗಳಿಂದ ಕಾರ್ಯಕ್ರಮಕ್ಕೆ ಹಾಜರಾಗಲು ಸಾಧ್ಯವಾಗದಿದ್ದರೂ, ಯೋಗ ಗುರುಗಳಾದ ಅನ್ನದಾನಯ್ಯನವರ ಸೇವೆ ಶ್ಲಾಘನೀಯವಾಗಿದ್ದು, ಇಂತಹ ಮಾದರಿಯ ಯೋಗ-ಧ್ಯಾನ ಕಾರ್ಯಕ್ರಮಗಳಿಗೆ ತಾಲೂಕಾ ಆಡಳಿತದಿಂದ ಅಗತ್ಯ ಸಹಕಾರ ನೀಡಲಾಗುವುದು ಎಂದು ತಿಳಿಸಿದ್ದಾರೆ.ಧ್ಯಾನ ದಿನಾಚರಣೆಯ ಅಂಗವಾಗಿ ಡಿಸೆಂಬರ್ 21 ರಂದು ಬೆಳಿಗ್ಗೆ 5:30 ರಿಂದ 6:30ರ ವರೆಗೆ ಯೋಗ ಗುರು ಅನ್ನದಾನಯ್ಯನವರು ಧ್ಯಾನ ಶಿಬಿರವನ್ನು ನಡೆಸಿಕೊಟ್ಟರು. ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಖ್ಯಾತ ವಕೀಲರಾದ ಎನ್. ರಾಜು, ಧ್ಯಾನದ ಕೊಡುಗೆಯನ್ನು ವಿಶ್ವಕ್ಕೆ ಪರಿಚಯಿಸಿದ್ದು ಭಾರತವಾಗಿದ್ದು, ಇದು ಹೆಮ್ಮೆಯ ವಿಷಯ ಎಂದು ಹೇಳಿದರು.ಡಾ. ಅಂಬಿಕಾ ಮಧುಸೂದನ್ ಮಾತನಾಡಿ, ನಿತ್ಯ ಧ್ಯಾನ ಅಭ್ಯಾಸದಿಂದ ದೈಹಿಕ ಹಾಗೂ ಮಾನಸಿಕ ಚೈತನ್ಯ ಹೆಚ್ಚಾಗುತ್ತದೆ ಎಂದು ಹೇಳಿದರು. ಕಲ್ಮಠ ಆಯುರ್ವೇದಿಕ್ ಕಾಲೇಜಿನ ಡಾ. ವಿಕ್ರಮಾದಿತ್ಯ ಮಾತನಾಡಿ, ಧ್ಯಾನವು ನಿತ್ಯ ಜೀವನದ ಅವಿಭಾಜ್ಯ ಅಂಗವಾಗಿದೆ ಎಂದು ಅಭಿಪ್ರಾಯಪಟ್ಟರು.ಧ್ಯಾನ ದಿನಾಚರಣೆಯ ಅಂಗವಾಗಿ ಶಿಬಿರದಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಕಲ್ಮಠ ಆಯುರ್ವೇದಿಕ್ ಕಾಲೇಜಿನ ವಿದ್ಯಾರ್ಥಿಗಳು, ನಿತ್ಯ ಯೋಗ ಸಾಧಕರು ಹಾಗೂ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

# ಸ್ಲಂ ಬೋರ್ಡ್ ಹಕ್ಕುಪತ್ರ ವಿತರಣೆಗೆ ವಿರೋಧ ಬಹುಜನ ದಲಿತ ಸಂಘರ್ಷ ಸಮಿತಿ ತೀವ್ರ ಆಕ್ಷೇಪ – 'ಅಕ್ರಮಕ್ಕೆ ಮುದ್ರೆ ಹಾಕಬೇಡಿ'

❑ ನೈಜ್ಯ ದೆಸೆ ನ್ಯೂಸ್



ಕವಿತಾಳ: ಸಿರವಾರ ತಾಲೂಕು ಕವಿತಾಳ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ (ಸ್ಲಂ ಬೋರ್ಡ್) ಮೂಲಕ ನೀಡಲಾಗುತ್ತಿರುವ ಹಕ್ಕುಪತ್ರಗಳನ್ನು ತಕ್ಷಣವೇ ಸ್ಥಗಿತಗೊಳಿಸಬೇಕು ಎಂದು ಬಹುಜನ ದಲಿತ ಸಂಘರ್ಷ ಸಮಿತಿ ಆಗ್ರಹಿಸಿದೆ.ಪಟ್ಟಣ ಪಂಚಾಯಿತಿ ಮುಖ್ಯ ಅಧಿಕಾರಿ ಜಸ್ಪಾಲ್ ಸಿಂಗ್ ಅವ-ರಿಗೆ ಮನವಿ ಪತ್ರ ಸಲ್ಲಿಸಲಾಯಿತು. ನಂತರ ಬಹುಜನ ದಲಿತ ಸಂಘರ್ಷ ಸಮಿತಿ (ಭೀಮವಾದ) ರಾಜ್ಯ ಸಂಚಾಲಕರಾದ ಅಲ್ಲಮಪ್ರಭು ಮಾತನಾಡಿ ಪಟ್ಟಣದ ತ್ರಯಂಬಕೇಶ್ವರ ದೇವಸ್ಥಾನದ ಹಿಂಭಾಗದಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಹಕ್ಕು ಪತ್ರ ನೀಡಬಾರದು. ಪ್ರಸ್ತುತ ಹಕ್ಕುಪತ್ರ ಹಂಚಿಕೆ ಪ್ರಕ್ರಿಯೆಯಲ್ಲಿ ಸ್ಪಷ್ಟತೆ ಕೊರತೆಯಿದ್ದು, ಯಾರು ನಿಜವಾದ ಬಡವರು, ಯಾರು ಅನರ್ಹರು ಎಂಬುದರ ಕುರಿತು ಸಮಗ್ರ ಮಾಹಿತಿಯಿಲ್ಲದೇ ವಿತರಣೆಗೆ ಮುಂದಾಗಿರುವುದು ಗೊಂದಲ ಹಾಗೂ ಅಕ್ರಮಗಳಿಗೆ ದಾರಿ ಮಾಡಿಕೊಡಲಿದೆ ಎಂದು ಆರೋಪಿಸಿದರು. ಈ ಹಿನ್ನೆಲೆ ಪ್ರತಿ ಕುಟುಂಬದ ಆದಾಯ, ವಾಸ್ತವ್ಯ ಅವಧಿ, ಜಮೀನು ಹೊಂದಿರುವ ಮಾಹಿತಿ, ಕುಟುಂಬದ ಸಾಮಾಜಿಕ ಸ್ಥಿತಿ ಸೇರಿದಂತೆ ಎಲ್ಲಾ ಅಂಶಗಳನ್ನು ಒಳಗೊಂಡ ಸಾಮಾಜಿಕ-ಆರ್ಥಿಕ ಸಮೀಕ್ಷೆ ಅಗತ್ಯವೆಂದು ಹೇಳಿದರು.ಅರ್ಹ ದಲಿತರು, ಹಿಂದುಳಿದ ವರ್ಗಗಳು ಹಾಗೂ ನಿಜವಾದ ಸ್ಲಂ ನಿವಾಸಿಗಳಿಗೆ ಮಾತ್ರ ಹಕ್ಕುಪತ್ರ ಸಿಗಬೇಕು ಎಂಬುದು ಸಂಘಟನೆಗಳ ಸ್ಪಷ್ಟ ನಿಲುವಾಗಿದೆ. ಸಮೀಕ್ಷೆ ಪೂರ್ಣಗೊಳ್ಳುವವರೆಗೂ ಹಕ್ಕುಪತ್ರ ವಿತರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಬೇಕು ಎಂದು ಅವರು ಆಗ್ರಹಿಸಿದರು. ಇದರ ಜೊತೆಗೆ, ಸಮೀಕ್ಷಾ ವರದಿಯನ್ನು ಸಾರ್ವಜನಿಕವಾಗಿ ಪ್ರಕಟಿಸಿ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಬೇಕು, ನಂತರ ಅಂತಿಮ ಪಟ್ಟಿಯನ್ನು ತಯಾರಿಸಿ ಹಕ್ಕುಪತ್ರ ವಿತರಣೆ ನಡೆಸಬೇಕು ಎಂದು ಸಲಹೆ ನೀಡಿದರು. ಇದರಿಂದ ಪಾರದರ್ಶಕತೆ ಹೆಚ್ಚುವ ಜೊತೆಗೆ ಭವಿಷ್ಯದ ಕಾನೂನು ವಿವಾದಗಳನ್ನು ತಪ್ಪಿಸಬಹುದು ಎಂದು ಅವರು ಅಭಿಪ್ರಾಯಪಟ್ಟರು.ಪಟ್ಟಣ ಪಂಚಾಯಿತಿ ಅಧಿಕಾರಿಗಳು, ಮೇಲಧಿಕಾರಿಗಳ ಮಾರ್ಗಸೂಚಿ ಪಡೆದು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಪ್ರತಿಕ್ರಿಯೆ ನೀಡಿದರು.ಈ ಸಂದರ್ಭದಲ್ಲಿ ದಲಿತ ಮುಖಂಡರಾದ ಈರಣ್ಣ ಕೆಳಗೇರಿ, ಯಾಕೋ ಕಡತಲ್, ಹನುಮಂತ ಬಳ್ಳಾಪುರ, ಪ.ಪಂ ನಾಮನಿರ್ದೇಶನ ಸದಸ್ಯ ಅಯ್ಯಪ್ಪ ನಿಲೋಗಲ್, ಮೌನೇಶ್ ಕೊಡ್ಲಿ, ಕಿರಿಲಿಂಗಪ್ಪ ಮ್ಯಾಗಳಮನಿ, ಬಸವರಾಜ, ಮಹಾದೇವ, ಹುಚ್ಚಪ್ಪ, ಆಜಪ್ಪ ಇದ್ದರು.

## ನೇಮಕಾತಿ ಪ್ರಕಟಣೆ

WCD ರಾಯಚೂರು ನೇಮಕಾತಿ 2026 – 340 ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಂ–ಯರ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ WCD ರಾಯಚೂರು ನೇಮಕಾತಿ 2025: 340 ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರಾಯಚೂರು ಡಿಸೆಂಬರ್ 2025 ರ ಅಧಿಕೃತ ಅಧಿಸೂಚನೆಯ ಮೂಲಕ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ರಾಯಚೂರು – ಕರ್ನಾಟಕ ಸರ್ಕಾರದಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 07–ಜನವರಿ–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 10–12–2025 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯದಿನಾಂಕ:07–ಜನವರಿ–2026ಅಧಿಕೃತ ವೆಬ್‌ಸೈಟ್: karnemakaone.kar.nic.in ಕೊನೆಯ ದಿನಾಂಕ:07–ಜನವರಿ–2026

## ಮಾನ್ವಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಪೋಲಿಯೋ ಲಸಿಕಾ ಕಾರ್ಯಕ್ರಮವನ್ನು ಉದ್ಘಾಟಿಸಿದ ಶಾಸಕ ಜಿ ಹಂಪಯ್ಯ ನಾಯಕ



❑ ನೈಜ್ಯ ದೆಸೆ ನ್ಯೂಸ್

ಮಾನ್ವಿ : ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಪೋಲಿಯೋ ಲಸಿಕಾ ಕಾರ್ಯಕ್ರಮವನ್ನು ಉದ್ಘಾಟಿಸಿ, ಉದ್ಘಾಟನಾ ನುಡಿಯನ್ನು ನೋಡಿದ ಶಾಸಕ ಹಂಪಯ್ಯ ನಾಯಕ್ ರವರು ಹುಟ್ಟಿದ ಮಗುವಿನಿಂದ ಐದು ವರ್ಷದ ಮಗುವಿನವರೆಗೆ ಕಡ್ಡಾಯವಾಗಿ 2 ಹನಿ ಪೋಲಿಯೋ ಲಸಿಕ ಎನ್ನು ಹಾಕಿದಾಗ ಈಗ ನಮ್ಮ ದೇಶದಲ್ಲಿ ಒಂದು ಪ್ರಕರಣವು ಸಹ ಇಲ್ಲ ನೆರೆಯ ರಾಷ್ಟಗಳಲ್ಲಿ ಈ ಒಂದು ಪೋಲಿಯೋ ಪ್ರಕರಣಗಳು ಇನ್ನೂ ಜೀವಂತವಾಗಿ ಇರುವುದರಿಂದ ನಮ್ಮ ರಾಜ್ಯ ಮತ್ತು ಕೇಂದ್ರ ಸರ್ಕಾರವು ಈ ನಿರ್ಧಾರಕ್ಕೆ ಬಂದು ಪುನಃ ಮತ್ತೆ ಈ ಲಸಿಕ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದಾರೆ ಇದರ ಸದುಪಯೋಗವನ್ನು ಪ್ರತಿಯೊಬ್ಬರೂ ಸಹ ನಮ್ಮ ಮನೆಯ ಅಕ್ಕಪಕ್ಕ ಹಾಗೂ ನಮ್ಮ ಮನೆಯವರಿಗೆ ಇದರ ಬಗ್ಗೆ ವಿಚಾರವನ್ನು ತಿಳಿಸಿ ಕಡ್ಡಾಯವಾಗಿ ಈ ಲ ಸಿಕ್ಕಿಯನ್ನು ಹಾಕಿಸಲು ತಿಳಿ ಹೇಳಬೇಕು ಎಂದು ಹೇಳಿದರು.ನಮ್ಮ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 47,000 ಮಕ್ಕಳ ಒಂದು ಟಾರ್ಗೆಟ್ಟನ್ನು ತಾಲೂಕ್ ವೈದ್ಯಾಧಿಕಾರಿಗಳು ಮಾಡಿಕೊಂಡಿದ್ದಾರೆ ಇದರ ಜೊತೆಗೆ 241 ಬೂತ್ ಗಳನ್ನು ಸಹ ಮಾಡಿದ್ದಾರೆ ಈ ದಿನ ಬೂತ್ ಕೇಂದ್ರಗಳಲ್ಲಿ ಲಸಿಕೆ ಹಾಕಿದರೆ ನಾಳೆಯಿಂದ ಮೂರು ದಿನಗಳ ವರೆಗೆ ಮನೆಮನೆಗೆ ತೆರಳಿ ಕಾರ್ಯಕರ್ತರು ಈ ಲಸಿಕೆಯನ್ನು ಹಾಕಲಿದ್ದಾರೆ ಇವರಿಗೆ ಸಾರ್ವಜನಿಕರು ಸಹಕಾರವನ್ನು ನೀಡಬೇಕು ನಮ್ಮ ವಿಧಾನಸಭಾ ಕ್ಷೇತ್ರದಲ್ಲಿ ಲಸಿಕೆ ಕಾರ್ಯಕ್ರಮವನ್ನು ತಾವೆಲ್ಲರೂ ಯಶಸ್ವಿಗೊಳಿಸಬೇಕು ಎಂದು ಶುಭ ಹಾರೈಸಿದರು.ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಹಾಗೂ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಅಬ್ದುಲ್ ಗಫೂರ್ ಸಾಬ್, ತಾಲೂಕ ಪಂಚ ಗ್ಯಾರಂಟಿಗಳ ಅಧ್ಯಕ್ಷರಾದ ಅಧ್ಯಕ್ಷರಾದ ಬಿಕೆ ಅಂಬರೇಶಪ್ಪ ವಕೀಲರು, ಸತ್ತಾರ್ ಬಂಗಲೆವಾಲೇ, ಕಾಮೇಶ್ ಮಂದಕಲ್,ತಾಲೂಕ ಆರೋಗ್ಯ ಅಧಿಕಾರಿಗಳಾದ ಶರಣಬಸವ ಗೌಡ ಮುಷ್ಟೂರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಧಿಕಾರಿಗಳಾದ ಗೋಕುಲ್ ಸಬ್, ಪುರಸಭೆಯ ಮುಖ್ಯ ಅಧಿಕಾರಿಗಳಾದ ಪರಶುರಾಮ್ ದೇವಮಾನೇ, ಆಸ್ಪತ್ರೆಯ ಸಿಬ್ಬಂದಿ ವರ್ಗ ಸಾರ್ವಜನಿಕರು ಉಪಸ್ಥಿತರಿದ್ದರು.

## ತಾಲೂಕು ಸರ್ಕಾರಿ ನೌಕರರ ಸಂಘದಿಂದ ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳಿಗೆ ಸನ್ಮಾನ.



❑ ನೈಜ್ಯ ದೆಸೆ ನ್ಯೂಸ್

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದಿಂದ ಶನಿವಾರ ಸಂಜೆ ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳಿಗೆ ಸನ್ಮಾನಿಸಲಾಯಿತು. ನಗರದ ತಾಲೂಕು ಪಂಚಾಯತಿ ಆವರಣದಲ್ಲಿ ಸರ್ಕಾರಿ ನೌಕರರ ಸಂಘದ ಕಛೇರಿಯಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಇತ್ತೀಚೆಗೆ ನಡೆದ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಹಾಗೂ ತಾಲೂಕಾ ಘಟಕದ ಪದಾಧಿಕಾರಿಗಳಿಗೆ ಸನ್ಮಾನಿಸಿ ಗೌರವಿಸಿದರು. ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರ ಹಿರೇಮಠ, ಪ್ರಧಾನ ಕಾರ್ಯದರ್ಶಿ ಆನಂದ ಮೋಹನ, ರಾಜ್ಯ ಪರಿಷತ್ ಸದಸ್ಯ ದೊಡ್ಡಲಿಂಗಪ್ಪ, ತಾಲೂಕಾ ಖಜಾಂಚಿ ವೀರನಗೌಡ, ಉಪಾಧ್ಯಕ್ಷ ಶಿವಕುಮಾರ, ಸಂಘಟನಾ ಕಾರ್ಯದರ್ಶಿಗಳಾದ ಮಹ್ಮದ್ ಮಾರುಫ್, ಬಸವರಾಜ ಯಲಬುರ್ಗಿ, ಹನುಮಂತ, ಸಹ ಕಾರ್ಯದರ್ಶಿ ಚನ್ನಬಸವ, ಹುಸೇನ ಸಾಬ್, ಜಿಲ್ಲಾ ಉಪಾಧ್ಯಕ್ಷ ಭರತ್ ಕುಮಾರ, ಸಂಘಟನಾ ಕಾರ್ಯದರ್ಶಿ ಶ್ಯಾಮೀದ್ ಸೇರಿದಂತೆ ಅನೇಕರು ಇದ್ದರು.

## ಕವಿತಾಳ: ಐದು ವರ್ಷದೊಳಗಿನ ಮಕ್ಕಳಿಗೆ ತಪ್ಪದೇ ಪೋಲಿಯೊ ಲಸಿಕೆ ಹಾಕಿಸಿ – ಅಯ್ಯನಗೌಡ

❑ ನೈಜ್ಯ ದೆಸೆ ನ್ಯೂಸ್



ಕವಿತಾಳ :–ರಾಯಚೂರು ಜಿಲ್ಲೆಯಲ್ಲಿ ಪಲ್ಸ್ ಪೋಲಿಯೊ ಲಸಿಕೆ ಕಾರ್ಯಕ್ರಮವೂ ಇದೇ ಡಿ.21ನೇ ತಾರೀಕಿನಿಂದ 24ರವರೆಗೂ ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪೋಲಿಯೊ ಲಸಿಕೆ ಹಾಕಿಸಬೇಕೆಂದು ಪಟ್ಟಣದ ಸರ್ಕಾರಿ ಪ್ರಾಥಮಿಕ ಕನ್ಯಾ ಶಾಲೆ ಮುಖ್ಯಗುರು ಅಯ್ಯನಗೌಡ ಹೇಳಿದರು.ಜಿಲ್ಲಾಡಳಿತ, ಜಿಪಂ. ರಾಯಚೂರು,ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು, ಸಮುದಾಯ ಆರೋಗ್ಯ ಕೇಂದ್ರ ಕವಿತಾಳ ಇವರ ಸಹಯೋಗದಲ್ಲಿ ಪಟ್ಟಣದ ಸರ್ಕಾರಿ ಪ್ರಾಥಮಿಕ ಕನ್ಯಾ ಶಾಲಾ ಆವರಣದಲ್ಲಿ ಗುರುವಾರ ಏರ್ಪಡಿಸಿದ್ದ ಪೋಲಿಯೊ ಲಸಿಕಾ ಜಾಗೃತಿ ಜಾಥಾ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು ಪ್ರಸಕ್ತ ಸಾಲಿನ ಪಲ್ಸ್ ಪೋಲಿಯೊ ಲಸಿಕೆ ಕಾರ್ಯಕ್ರಮ ಯಶಸ್ವಿಗಾಗಿ ನಿಯೋಜನೆಗೊಂಡ ವೈದ್ಯರು ಆರೋಗ್ಯ ಇಲಾಖೆ ಸಿಬ್ಬಂದಿಗಳು, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ತಮಗೆ ನೀಡಿದ ಕೆಲಸವನ್ನು ಅಚ್ಚುಕಟ್ಟಾಗಿನಿರ್ವಹಿಸುವಂತೆ ಸಲಹೆ ನೀಡಿದರು. ಸಂದರ್ಭದಲ್ಲಿ ಪ್ರಾ. ಆರೋಗ್ಯ ಸುರಕ್ಷಾಧಿಕಾರಿ, ಸುಮಂಗಲಾ, ಆಂಜಿನಮ್ಮ, ಪ್ರಯೋಗ ತಂತ್ರಜ್ಞ ಹನುಮಂತ,ಆಶಾಗಳಾದ ಸರಸ್ವತಿ, ಹುಚ್ಚಮ್ಮ, ರೇಣುಕಾ, ನಿಂಗಮ್ಮ, ಶಕೀರಾ, ಶಾಲಾ ಶಿಕ್ಷಕಿಯರಾದ ಸುಪ್ರಿತಾ, ಶ್ರೀದೇವಿ, ಬಸಮ್ಮ, ಮಂಜುಳಾ, ಲಕ್ಷ್ಮೀ, ಆಯಿಷಾ ಪಾಷಾ ಹಾಗೂ ಶಾಲಾ ಮಕ್ಕಳು ಸೇರಿದಂತೆ ಇತರಿದ್ದರು.

## ಸೋಂಕು ಮರಳದಿರಲು ಲಸಿಕೆ ಹಾಕಿಸಿ, ಆಲ್ಕೋಡ ಗ್ರಾಪಂ ಅಧ್ಯಕ್ಷ ಮಹೇಶ ನಾಯಕ ಸಲಹೆ. ಪಲ್ಸ್ ಪೋಲಿಯೋ ಅಭಿಯಾನಕ್ಕೆ ಚಾಲನೆ.

❑ ನೈಜ್ಯ ದೆಸೆ ನ್ಯೂಸ್



ಅರಕೇರಾ : ದೇಶವನ್ನು ಪೋಲಿಯೋ ರೋಗದಿಂದ ಸಂಪೂರ್ಣ ಮುಕ್ತವಾಗಿರಿಸಲು ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಪಲ್ಸ್ ಪೋಲಿಯೋ ಅಭಿಯಾನವನ್ನು ಜಾರಿಗೆ ತಂದಿದೆ ಎಂದು ಗ್ರಾಪಂ ಅಧ್ಯಕ್ಷ ಮಹೇಶ ನಾಯಕ ಹೇಳಿದರು.ತಾಲೂಕಿನ ಆಲ್ಕೋಡ ಗ್ರಾಪಂ ಆವರಣದಲ್ಲಿ ಜಿಪಂ, ಆರೋಗ್ಯ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ ವತಿಯಿಂದ ಹಮ್ಮಿಕೊಂಡಿದ್ದ ಪಲ್ಸ್ ಪೋಲೀಯೋ ಅಭಿಯಾನಕ್ಕೆ ಭಾನುವಾರ ಚಾಲನೆ ನೀಡಿ ಮಾತನಾಡಿದರು.ಪೋಲಿಯೋ ರೋಗ ದೇಶದಿಂದ ಸಂಪೂರ್ಣವಾಗಿ ನಿರ್ಮೂಲನೆ ಆಗಿದೆ. ಆದರೆ ವಿದೇಶಗಳಲ್ಲಿ ಈ ರೋಗ ಇನ್ನು ಸಕ್ರಿಯವಾಗಿರುವುದರಿಂದ ನಮ್ಮ ದೇಶದಲ್ಲಿ ಸೋಂಕು ಮರಳದಂತೆ ಎಚ್ಚರ ವಹಿಸಬೇಕು. ಆದ್ದರಿಂದ 0 ರಿಂದ 5 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಕಡ್ಡಾಯವಾಗಿ ಪಲ್ಸ್ ಪೋಲೀಯೊ ಲಸಿಕೆ ಹಾಕಿಸಬೇಕು. ಕೇವಲ ಎರಡು ಹನಿ ಲಸಿಕೆ ಸದೃಢ ಆರೋಗ್ಯಕ್ಕೆ ಸಹಕಾರಿಯಾಗುತ್ತದೆ ಎಂದರು. ಗ್ರಾಪಂ ಸದಸ್ಯ ಅಮರೇಶ ಕುಂಬಾರ, ಎಎನ‌ಎಮ್ ಹುಲಿಗೆಮ್ಮ, ಅಂಗನವಾಡಿ ಕಾರ್ಯಕರ್ತೆ ಶಕುಂತಲಾ, ರೇಣುಕಾ ಪ್ರಮುಖರಾದ ಭುವನೇಶ, ಅಮರೇಶ ಅಕ್ಕರಕಿ ಇತರರಿದ್ದರು.

## ಶಾಸಕ ಮಾನಪ್ಪ ವಜ್ಜಲ್ಪ ಪಲ್ಸ್ ಪೋಲಿಯೋ ಅಭಿಯಾನ ಉದ್ಘಾಟಿಸಿ– ಮೂರು ನೂತನ ಆಂಬುಲೆನ್ಸ್‌ಗಳಿಗೆ ಚಾಲನೆ ನೀಡಿದರು



❑ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು : ಡಿ 22 ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಇಂದು ಜನಪ್ರಿಯ ಶಾಸಕ ಮಾನಪ್ಪ ಡಿ. ವಜ್ಜಲ್ ಅವರು "ಪಲ್ಸ್ ಪೋಲಿಯೋ" ಅಭಿಯಾನವನ್ನು ಉದ್ಘಾಟಿಸಿದರು. ಪುಟ್ಟ ಮಕ್ಕಳಿಗೆ ಪೋಲಿಯೋ ಲಸಿಕೆ ನೀಡಿ, ಲಸಿಕಾ ಅಭಿಯಾನದ ಮಹತ್ವವನ್ನು ಹೇಳಿದರು.ನಂತರ ಆಸ್ಪತ್ರೆಯಲ್ಲಿ ನೂತನವಾಗಿ ಮೂರು ಆಂಬುಲೆನ್ಸ್ ವಾಹನಗಳಿಗೆ ಶಾಸಕರು ಹಸಿರು ನಿಶಾನೆ ತೋರಿಸಿ ಚಾಲನೆ ನೀಡಿದರು. ಈ ಆಂಬುಲೆನ್ಸ್‌ಗಳಿಂದ ಲಿಂಗಸಗೂರು ಹಾಗೂ ಸುತ್ತಮುತ್ತಲ ಗ್ರಾಮೀಣ ಪ್ರದೇಶದ ಜನರಿಗೆ ತ್ವರಿತ ಹಾಗೂ ಉತ್ತಮ ತುರ್ತು ಆರೋಗ್ಯ ಸೇವೆ ದೊರೆಯಲಿದೆ ಎಂದು ಹೇಳಿದರು. ನಂತರ ವಿಧಾನ ಪರಿಷತ್ ಸದಸ್ಯರಾದ ಶರಣಗೌಡ ಪಾಟೀಲ್ ಬಯ್ಯಾಪುರ ಅವರು ಮಾತನಾಡಿ, ಮಕ್ಕಳ ಆರೋಗ್ಯ ರಕ್ಷಣೆಯಲ್ಲಿ ಪಲ್ಸ್ ಪೋಲಿಯೋ ಅಭಿಯಾನ ಮಹತ್ವದ ಪಾತ್ರ ವಹಿಸುತ್ತಿದ್ದು, ಪ್ರತಿಯೊಬ್ಬ ಪೋಷಕರೂ ತಮ್ಮ ಮಕ್ಕಳಿಗೆ ಲಸಿಕೆ ಹಾಕಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.ವೈದ್ಯಾಧಿಕಾರಿ ಡಾ. ರುದ್ರಗೌಡ ಅವರು ಪೋಲಿಯೋ ನಿರ್ಮೂಲನೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು ವಿವರಿಸಿದರು. ಈ ಸಂದರ್ಭದಲ್ಲಿ ಲಿಂಗಸಗೂರು ಮಂಡಲ ಅಧ್ಯಕ್ಷ ಕೆ. ನಾಗಭೂಷಣ್ ಸೇರಿದಂತೆ ಪಕ್ಷದ ಹಿರಿಯ ಮುಖಂಡರು, ಪ್ರಮುಖ ಗಣ್ಯರು ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ನಿರ್ಮಲ ತುಂಗಭದ್ರ ಅಭಿಯಾನ ಮೂರನೇ ಹಂತದ "ಜಲ ಜಾಗೃತಿ ಜನ ಜಾಗೃತಿ"ಪಾದಯಾತ್ರೆಯ ಪೂರ್ವಭಾವಿ ಸಭೆ

❑ ನೈಜ್ಯ ದೆಸೆ ನ್ಯೂಸ್



ಮನವಿ : ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಾನ್ವಿ ನಗರದ ಶ್ರೀಮಠದ ಧ್ಯಾನ ಮಂದಿರದಲ್ಲಿ ಈ ದಿನ ರಾಷ್ಟ್ರೀಯ ಸ್ವಾಭಿಮಾನ ಆಂದೋಲನ ನವದೆಹಲಿ ನಿರ್ಮಲ ತುಂಗಭದ್ರಾ ಅಭಿಯಾನ ಸಮಿತಿ ಕರ್ನಾಟಕ ಪರ್ಯಾವರಣ ಟ್ರಸ್ಟ್ ಶಿವಮೊಗ್ಗ ಇವರ ಸಂಯುಕ್ತ ಆಶ್ರಯದಲ್ಲಿ ನಿರ್ಮಲ ತುಂಗಭದ್ರ ಅಭಿಯಾನ ಮೂರನೇ ಹಂತದ ಜಲ ಜಾಗೃತಿ ಜನ ಜಾಗೃತಿ ಪಾದಯಾತ್ರೆಯ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಜಿ ಹಂಪಯ್ಯ ನಾಯಕ ಇವರು.ಈ ಸಭೆಯಲ್ಲಿ ಮಾತನಾಡಿದ ಮಾನ್ಯ ಶಾಸಕರು ನಮ್ಮ ಮುಂದಿನ ಪೀಳಿಗೆಗೆ ಪರಿಶುದ್ಧವಾದ ವಾತಾವರಣ ಹಾಗೂ ನೀರನ್ನು ನಮ್ಮ ಭಾಗಕ್ಕೆ ಬರಲು ಈಗಿನಿಂದಲೇ ಈ ಸಮಿತಿಯು ನಡೆಸುತ್ತಿರುವ ಸ್ವಚ್ಛತಾ ಕಾರ್ಯಕ್ರಮದಲ್ಲಿ ನಾವೆಲ್ಲರೂ ಭಾಗವಹಿಸಿ ತುಂಗಭದ್ರ ದಡದಲ್ಲಿ ಬರುವ ಹಳ್ಳಿಗಳಲ್ಲಿ ಇದರ ಬಗ್ಗೆ ಒಂದು ಜಾಗೃತಿಯನ್ನು ಮೂಡಿಸುವ ನಿಟ್ಟಿನಲ್ಲಿ ಮತ್ತು ಈ ಒಂದು ಅಭಿಯಾನದಲ್ಲಿ ತನು ಮನ ಧನದಿಂದ ಪ್ರತಿಯೊಬ್ಬರೂ ಭಾಗವಹಿಸಿದಾಗ ಮಾತ್ರ ಈ ಒಂದು ಅಭಿಯಾನ ಯಶಸ್ವಿಯಾಗಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಈ ಸಮಿತಿಗೆ ನನ್ನಿಂದ ಆಗುವ ಎಲ್ಲಾ ಸಹಾಯವನ್ನು ಮಾಡಲು ಸಹಾಯ ಸಹಕಾರ ನೀಡಲು ಸಿದ್ಧನಿದ್ದೇನೆ ಎಂದು ಈ ಸಂದರ್ಭದಲ್ಲಿ ಹೇಳಿದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಹಾಗೂ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಅಬ್ದುಲ್ ಗಫೂರ್ ಸಾಬ್, ಪಂಚ ಗ್ಯಾರಂಟಿಗಳ ಅಧ್ಯಕ್ಷರಾದ ಬಿಕೆ ಅಂಬರೇಶಪ್ಪ ವಕೀಲರು,ಸಮಿತಿಯ ಸಂಚಾಲಕರು ಎನ್ ಉದಯ್ ಕುಮಾರ್ ಸಾಹುಕಾರ್,ಸಿರವಾರ್, ಮಾಜಿ ಶಾಸಕರಾದ ಬಸನಗೌಡ ಬ್ಯಾಗವಾಟ್, ಗಂಗಾಧರ್ ನಾಯಕ್, ಈ ಸಮಿತಿಯ ರಾಷ್ಟೀಯ ಅಧ್ಯಕ್ಷರಾದ ಬಸವರಾಜ್ ಪಾಟೀಲ್ ವೀರಾಪುರ್, ಸಂಚಾಲಕರಾದ ಅನಿತಾ ಮಂತ್ರಿ, ಅರುಣ್ ಚಂದ ಶೆಟ್ಟಿ,ಮಲ್ಲಯ್ಯ ಗೌಡ ಗಣೇಕಲ್, ಕೃಪಾ ಸಾಗರ್ ಪಾಟೀಲ, ಸುಧಾಕರ್, ಮಂಜುನಾಥ್ ನಾಯಕ್ ಜಾನೇಕಲ್, ಸುಂಕನೂರು ಶಿವಪ್ಪ ನಾಯಕ್ ವಕೀಲರು, ಡಾಕ್ಟರ್ ಬೊಮ್ಮನಾಳ, ಸತ್ತಾರ್ ಬಂಗ್ಲೆವಲೆ ಇನ್ನೂ ಮುಂತಾದವರು ಉಪಸ್ಥಿತರಿದ್ದರು.

## ಪಟ್ಟಣದ ವಿವಿಧ ವಾರ್ಡಗಳಲ್ಲಿ ಸಾರ್ವಜನಿಕ ಕುಂದು ಕೊರತೆಗಳ ಸಭೆ ಸಾರ್ವಜನಿಕರ ಸಮಸ್ಯೆ ಆಲಿಸಿ ಸ್ಪಂದಿಸಿದ ಶಾಸಕ ನಾಡಗೌಡ

❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ವಾರ್ಡ್ ಗಳಲ್ಲಿ ಸುಸಜ್ಜಿತವಾದ ರಸ್ತೆ, ಚರಂಡಿ, ಸಮರ್ಪಕವಾದ ಕುಡಿಯುವ ನೀರಿನ ಸೌಲಭ್ಯ, ಪಡಿತರ ಪೂರೈಕೆ ಸರಿಯಾಗಿಲ್ಲ, ಅಂಗನವಾಡಿ ಕೇಂದ್ರದ ಆಹಾರ ಪದಾರ್ಥಗಳು ಸರಿಯಾಗಿ ಸಿಗುತ್ತಿಲ್ಲ, ಸರ್ಕಾರಿ ಶಾಲೆಗೆ ಕಾಂಪೌಂಡ್ ಇಲ್ಲದೆ ಇರುವುದ–ರಿಂದ ಕಾನೂನುಬಾಹಿರ ಚಟುವಟಿಕೆಗಳು, ಘನ ತ್ಯಾಜ್ಯ ವಸ್ತು ವಿಲೇವಾರಿಯಲ್ಲಿ ನಿರ್ಲಕ್ಷೆ, ಬಡಾವಣೆಯಲ್ಲಿರುವ ಉದ್ಯಾನವನದ ಸ್ವಚ್ಛತೆ ಹೀಗೆ ಹತ್ತು ಹಲವು ಸಮಸ್ಯೆಗಳನ್ನು ಇಲ್ಲಿಯ ಬಡಾವಣೆ ಜನರು ಮುಂದಿಟ್ಟಿದ್ದಾರೆ ಅವುಗಳನ್ನು ಆದಷ್ಟು ಬೇಗ ಪರಿಹರಿಸಬೇಕು ಪಟ್ಟಣದ ಜನತೆಗೆ ಮೂಲಭೂತ ಸೌಕರ್ಯಗಳನ್ನು ನೀಡುವಲ್ಲಿ ಯಾವುದೇ ರೀತಿಯ ನಿರ್ಲಕ್ಷ್ಯೆಯನ್ನು ನಾನು ಸಹಿಸುವುದಿಲ್ಲ ಎಂದು ಶಾಸಕ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ ಸಿ.ಎಸ್.ನಾಡಗೌಡ ಅಪ್ಪಾಜಿ ಅಧಿಕಾರಿಗಳಿಗೆ ತಿಳಿಸಿದರು. ರವಿವಾರ ಪಟ್ಟಣದ ಆಶ್ರಯ ನಗರದ ಸರ್ಕಾರಿ ಶಾಲೆ ಆವರಣದಲ್ಲಿ ಪುರಸಭೆ ಕಾರ್ಯಾಲಯ ತಾಳಿಕೋಟಿ ವತಿಯಿಂದ ಹಮ್ಮಿಕೊಂಡ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳ ಸಭೆಯಲ್ಲಿ ಅವರು ಮಾತನಾಡಿದರು. ಆಶ್ರಯ ನಗರವು ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದು ಬಡವರೆ ಹೆಚ್ಚಾಗಿರುವುದರಿಂದ ಇಲ್ಲಿ ಸಮರ್ಪಕವಾದ ಕುಡಿಯುವ ನೀರಿನ ವ್ಯವಸ್ಥೆ



ಇಲ್ಲ ಐದಾರು ದಿನಗಳಿಗೊಮ್ಮೆ ನೀರು ಪೂರೈಕೆ ಆಗುತ್ತಿರುವುದರಿಂದ ತುಮಕ ತೊಂದರೆ ಆಗುತ್ತದೆ ಎಂದು ಬಡಾವಣೆ ನಿವಾಸಿಗಳು ತಿಳಿಸಿದಾಗ ಪುರಸಭೆ ಮುಖ್ಯ ಅಧಿಕಾ–ರಿಗಳಿಗೆ ಈ ಕುರಿತು ಸೂಚನೆ ನೀಡಿ ವಾರಕ್ಕೆ ಎರಡು ಬಾರಿ ನೀರು ಪೂರೈಕೆ ಆಗುವಂತೆ ನೋಡಿಕೊಳ್ಳಲು ಸೂಚಿಸಿದರು. ಅದರಂತೆ ಅಂಗನವಾಡಿ ಹಾಗೂ ಪಡಿತರ ಕೇಂದ್ರದ ಅವ್ಯವಸ್ಥೆ ಸರಿಪಡಿಸಲು ತಹಸಿಲ್ದಾರ್ ಅವರಿಗೆ ಸೂಚನೆ ನೀಡಿದರು. ಆದಷ್ಟು ಬೇಗ ಸ್ವಚ್ಛಗೊಳಿಸಿ ಸುಂದರವಾಗಿಡಲು ಹಾಗೂ ಬಡಾವಣೆ ನಿವಾಸಿಗಳು ಸಹ ತಮ್ಮ ಮನೆಗಳ ಮುಂದೆ ಗಿಡಗಳನ್ನು ನೆಡೆಸಲು ತಿಳಿಹೇಳಿದರು. ಕೆಲ ಮಹಿಳೆಯರು ನಮಗೆ ಮನೆಗಳನ್ನು ನೀಡುವುದಾಗಿ 50,000 ಪಡೆದುಕೊಂಡಿದ್ದು ಇಲ್ಲಿವರೆಗೆ ಮನೆಗಳನ್ನು ಕೊಟ್ಟಿಲ್ಲ ನಾವು ಬಡವರು ಹೆಚ್ಚು ಮತ ಕಟ್ಟಿ ಮನೆಗಳನ್ನು ಪಡೆದುಕೊಳ್ಳಲು ಸಾಧ್ಯವಾಗುವುದಿಲ್ಲ ಎಂದರು ಇದಕ್ಕೆ ಉತ್ತರಿಸಿದ ಶಾಸಕರು ಇದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದ ಯೋಜನೆಯಾಗಿದೆ ನನಗೆ ಏನು ಮಾಡಲು ಬರುವುದಿಲ್ಲ ಯಾರಿಗೆ ಮನೆಗಳು ಬೇಡವೋ ಅವರು ಬಿಡಬಹುದಾಗಿದೆ ಎಂದರು. ಸರ್ಕಾರಿ ಶಾಲೆ ಕಾಂಪೌಂಡ್ ನಿರ್ಮಾಣವನ್ನು ಅನುದಾನ ಬಿಡುಗಡೆಗೊಳಿಸಿಕೊಂಡು ಮಾಡಲಾಗುವುದು ಎಂದರು. ನಿಮ್ಮೆಲ್ಲ ಸಮಸ್ಯೆಗಳನ್ನು ಪರಿಹರಿಸಲು ಅಧಿಕಾರಿಗಳಿಗೆ ಸೂಚನೆ ನೀಡುತ್ತೇನೆ ಇದಕ್ಕೆ ನಿಮ್ಮೆಲ್ಲರ ಸಹಕಾರ ಅವರಿಗೆ ಬೇಕು ಎಂದರು. ವಿಜಯಪುರ ಉಪ ವಿಭಾಗಾಧಿಕಾರಿ ಹಾಗೂ ಪುರಸಭೆ ಆಡಳಿತಾಧಿಕಾರಿ ಗುರುನಾಥ ದಡ್ಡೆ, ತಹಸಿಲ್ದಾರ್ ಡಾ. ವಿನಯಾ ಹೂಗಾರ, ಮುಖ್ಯಾಧಿಕಾರಿ ವಸಂತ ಪವಾರ, ಸಿ.ಎಚ್‌ಎಸ್ಸಿ ಆಡಳಿತ ವೈದ್ಯಧಿಕಾರಿ ಡಾ.ಶ್ರೀಶೈಲ್ ಹುಕ್ಕೇರಿ, ಗ್ಯಾರೆಂಟಿ ಸಮಿತಿ ಅಧ್ಯಕ್ಷ ಸಂಗಮೇಶ ದೇಸಾಯಿ, ಪಿಎಸೆಐ ಜ್ಯೋತಿ ಖೋತ್, ಪುರಸಭೆ ಮಾಜಿ ಅಧ್ಯಕ್ಷೆ ನೀಲಮ್ಮಗೌಡತಿ ಪಾಟೀಲ, ಮುಖಂಡರಾದ ವಿ.ಸಿ.ಹಿರೇಮಠ, ಸಿದ್ದನಗೌಡ ಪಾಟೀಲ ನಾವದಗಿ, ಪ್ರಭುಗೌಡ ಮದರಕಲ್ಲ,ಸಂಗನಗೌಡ ಅಸ್ಕಿ,ಬಸನಗೌಡ ಜೈನಾಪೂರ, ಮಹೆಬೂಬ ಕೆಂಭಾವಿ, ಕಾಶಿನಾಥ ದೇಸಾಯಿ, ಆಸಿಫ್ ಕೆಂಬಾವಿ, ಗೋಪಾಲ ಕಟ್ಟಿಮನಿ, ಬಸ್ಸು ಮಾದರ, ಪುರಸಭೆ ಹಾಗೂ ಕಂದಾಯ ಇಲಾಖೆ ಸಿಬ್ಬಂದಿಗಳು ಮತ್ತು ನಿವಾಸಿಗಳು ಇದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

## MD in Naturopathy

ಪ್ರಕೃತಿ ಚಿಕಿತ್ಸೆಯಲ್ಲಿ ಎಂಡಿ ಎಂದರೆ ಭಾರತದಲ್ಲಿ ವಿಶೇಷ ಸ್ನಾತಕೋತ್ತರ ವೈದ್ಯಕೀಯ ಪದವಿಯಾಗಿದ್ದು, ಸಾಂಪ್ರದಾಯಿಕ ಔಷಧವನ್ನು ನೈಸರ್ಗಿಕ, ಸಮಗ್ರ ಚಿಕಿತ್ಸೆಗಳಾದ ಪೌಷ್ಟಿಕಾಂಶ, ಯೋಗ ಮತ್ತು ಜೀವನಶೈಲಿಯ ಬದಲಾವಣೆಗಳೊಂದಿಗೆ ಸಂಯೋಜಿಸುತ್ತದೆ. ಇದನ್ನು ಹೆಚ್ಚಾಗಿ ಬಿಎನ್‌ವೈಎಸ್ (ಬ್ಯಾಚುಲರ್ ಆಫ್ ನೇಚರೋಪತಿ ಮತ್ತು ಯೋಗಿಕ್ ಸೈನ್ಸಸ್ ಸಮಗ್ರ ಆರೋಗ್ಯ ವಿಧಾನಕ್ಕಾಗಿ ತಡೆಗಟ್ಟುವ ಆರೈಕೆ ಮತ್ತು ಆಕ್ರಮಣಶೀಲವಲ್ಲದ ಚಿಕಿತ್ಸೆಗಳ ಮೇಲೆ ಕೇಂದ್ರೀಕರಿಸುತ್ತದೆ. ಪದವೀಧರರು ವೈದ್ಯರು, ಸಂಶೋಧಕರು ಅಥವಾ ಶಿಕ್ಷಕರಾಗಿ ಕೆಲಸ ಮಾಡಬಹುದು, ಸಮಗ್ರ ಸ್ವಾಸ್ಥ್ಯದ ಮೇಲೆ ಕೇಂದ್ರೀಕರಿಸುತ್ತಾರೆ. ಅಲೋಪತಿ ಜ್ಞಾನವನ್ನು ಪ್ರಕೃತಿಚಿಕಿತ್ಸಾ ತತ್ವಗಳೊಂದಿಗೆ ಸಂಯೋಜಿಸುವ ವಿಶೇಷ ವೈದ್ಯಕೀಯ ಪದವಿ. ನೈಸರ್ಗಿಕ ಪರಿಹಾರಗಳು, ಆಹಾರ ಪದ್ಧತಿ, ವ್ಯಾಯಾಮ ಮತ್ತು ಜೀವನಶೈಲಿಯ ಮಧ್ಯಸ್ಥಿಕೆಗಳ ಮೇಲೆ ಕೇಂದ್ರೀಕರಿಸುತ್ತದೆ. ರೋಗದ ಮೂಲ ಕಾರಣವನ್ನು ತಡೆಗಟ್ಟುವ ಔಷಧ ಮತ್ತು ಚಿಕಿತ್ಸೆಗೆ ಒತ್ತು ನೀಡುತ್ತದೆ.ಪ್ರಮುಖ ಅಧ್ಯಯನ ಪ್ರಕೃತಿಚಿಕಿತ್ಸೆಯ ತತ್ವಶಾಸ್ತ್ರ ಮತ್ತು ಅಭ್ಯಾಸ. ಅನ್ವಯಿಕ ಮೂಲ ವೈದ್ಯಕೀಯ ವಿಜ್ಞಾನಗಳು. ನೈಸರ್ಗಿಕ ಚಿಕಿತ್ಸೆಗಳ ಶಾರೀರಿಕ ಪರಿಣಾಮಗಳು (ಯೋಗ, ಪೋಷಣೆ, ಆಹಾರ ಪದ್ಧತಿ, ಅಕ್ಯುಪಂಕ್ಚರ್). ಸಾಮಾನ್ಯವಾಗಿ BNYS (ಬ್ಯಾಚುಲರ್ ಆಫ್ ನೇಚರೋಪತಿ ಮತ್ತು ಯೋಗಿಕ್ ಸೈನ್ಸಸ್) ಪದವಿ ಅಗತ್ಯವಿರುತ್ತದೆ. ವೃತ್ತಿ ಅವಕಾಶಗಳು: ಪ್ರಕೃತಿಚಿಕಿತ್ಸಕ ವೈದ್ಯರು/ವೈದ್ಯರು. ಕ್ಷೇಮ ಸಲಹೆಗಾರರು.ಶೈಕ್ಷಣಿಕ/ಸಂಶೋಧನಾ ಹುದ್ದೆಗಳು. ಯೋಗ, ಪೋಷಣೆ ಅಥವಾ ಅಕ್ಯುಪಂಕ್ಚರ್‌ನಲ್ಲಿ ಪರಿಣತಿ.

## ಸರ್ವಜ್ಞ ವಿದ್ಯಾಪೀಠದಲ್ಲಿ ಅಪರಾಧ ತಡೆ ಮಾಸಾಚರಣೆ



ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪಟ್ಟಣದ ಸರ್ವಜ್ಞ ವಿದ್ಯಾಪೀಠ ಕನ್ನಡ ಹಾಗೂ ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಶನಿವಾರದಂದು ಅಪರಾಧ ತಡೆ ಮಾಸಾಚರಣೆ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸ್ಥಳೀಯ ಪೊಲೀಸ್ ಠಾಣೆಯ ಪಿಎಸೆಐ ಜ್ಯೋತಿ ಖೋತ್ ಅವರು ವಿದ್ಯಾರ್ಥಿಗಳಿಗೆ ಅಪರಾಧ ತಡೆಯುವ ಮಾರ್ಗಗಳು ಹಾಗೂ ಅಪರಾಧ ಮಾಡದಂತೆ ಮತ್ತು ಅಪರಾಧ ಮಾಡುವ ವ್ಯಕ್ತಿಗಳಿಂದ ದೂರವಿರುವಂತೆ, ಚಿಕ್ಕ ವಯಸ್ಸಿನಲ್ಲಿ ದುಶ್ಚಟಗಳಿಂದ ದೂರವಿರುವಂತೆ ವಿದ್ಯಾರ್ಥಿಗಳಿಗೆ ಸಲಹೆನೀಡಿದರು. ಕಾರ್ಯಕ್ರಮದಲ್ಲಿ ಸಂಸ್ಥಾಪಕ ಅಧ್ಯಕ್ಷ ಸಿದ್ದನಗೌಡ ಮಂಗಳೂರ, ಮುಖ್ಯಗುರುಗಳಾದ ಸಂತೋಷ ಪವಾರ, ರಾಜು ಜವಳಗೇರಿ,ದೈಹಿಕ ಶಿಕ್ಷಕರಾದ ಬಸವರಾಜ ಚಳಗಿ, ಶಾಂತಗೌಡ ಬಿರಾದಾರ, ಸಂಜು ಕುಮಾರ ರಾಠೋಡ, ಬಸವರಾಜ ಸವದತ್ತಿ, ರವಿಕುಮಾರ ಅನಧಿನಿ, ರವಿಕುಮಾರ ಮಲಾಬಾದಿ, ರಸೂಲಸಾ ತುರ್ಕಣಗೇರಿ, ಸಿದ್ದನಗೌಡ ಮುದ್ನೂರ, ಭೀಮನಗೌಡ ಸಾಸನೂರ, ಚೇತನ ನಾವದಗಿ, ಸವಿತಾ ಅಸ್ಕಿ,ಶಿವಲೀಲಾ ಚುಂಚೂರು, ರೂಪ ಪಾಟೀಲ, ಸಂಗಮೇಶ ಬಿರಾದಾರ, ಸಂಗೀತ ಬಿರಾದಾರ, ಮೇಘಾ ಪಾಟೀಲ, ಬೋರಮ್ಮ ಉಕ್ಕಲಿ, ಅನಿತಾ ಚೌದ್ರಿ, ಜ್ಯೋತಿ ಪೋಲಿಸ್ ಪಾಟೀಲ, ಶೃತಿ ಚೌದ್ರಿ,ರಾಜಬಿ ಬಿದರಿ, ನಾಗರತ್ನ ಮೈಲೇಶ್ವರ, ಶಿವಕುಮಾರ ಕುಂಬಾರ, ಹೀನಾ ಸನದಿ, ದೇವೇಂದ್ರ ಗುಳೆದ, ಮುಬಾರಕ ಬನ್ನಟ್ಟಿ,ದೇವರಾಜ ದೇಸಾಯಿ, ಸುಮಾ ಹಿರೇಮಠ, ಪ್ರತಿಭಾ ಗುಬ್ಬೇವಾಡ, ಗುರುದೇವಿ ಮಡಿವಾಳರ, ಜೈಯಶ್ರೀ ಹದಿಮೂರ, ಜೈರಾಬಿ ಮುಲ್ಲಾ ಸರ್ವ ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಸಿರವಾರ ಆಂಜನೇಯ ದೇವಸ್ಥಾನದ ಹಾಲುಗಂಬ ಉತ್ಸವ

ನೈಜ್ಯ ದೆಸೆ ನ್ಯೂಸ್



ಸಿರವಾರ : ಪಟ್ಟಣದ ಬಯಲು ಆಂಜನೇಯ ದೇವಸ್ಥಾನದ ಹಾಲುಗಂಬ ಉತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಶನಿವಾರ ಸಂಜೆ ಅದ್ದೂರಿಯಾಗಿ ನಡೆಯಿತು. ಬಯಲು ಆಂಜನೇಯ ಸ್ವಾಮಿಯ ಎಳ್ಳ ಅಮವಾಸ್ಯೆ ಜಾತ್ರೆ ಮರುದಿನ ನಡೆಯುವ ಓಕುಳಿ ಅಂಗವಾಗಿ ನಡೆದ ಹಾಲುಗಂಬ ಹತ್ತುವ ಸ್ಪರ್ಧೆಯಲ್ಲಿ ಚಿಕ್ಕ ಮಕ್ಕಳು, ಯುವಕರು ಉತ್ಸಾಹದಿಂದ ಪಾಲ್ಗೊಂಡಿದ್ದರು. ಒಂದು ಗಂಟೆಗೂ ಅಧಿಕ ಸಮಯ ಹಾಲುಗಂಬ ಉತ್ಸವ ಸ್ಪರ್ಧೆ ನಡೆಯಿತು. ಒಬ್ಬರ ಮೇಲೆ ಒಬ್ಬರು ಹಾಲುಗಂಬ ಹತ್ತುತ್ತಾ ಕೆಳಗೆ ಜಾರಿ ಬೀಳುವ ದೃಶ್ಯಗಳನ್ನು ಕಂಡು ನೆರೆದಿದ್ದ ಯುವಕರು ಶಿಳ್ಳೆ ಚಪ್ಪಾಳೆಗಳ ಮೂಲಕ ಸ್ಪರ್ಧಾಳುಗಳನ್ನು ಹುರಿದುಂಬಿಸುತ್ತಿದ್ದರು.ಗಂಗಾಮತಸ್ಥರು ಎರಚುತ್ತಿದ್ದ ನೀರಿನ ರಸಭಸಕ್ಕೆ ಕಂಬ ಹತ್ತಲು ಹರಸಾಹಸ ಪಡುವಂತಾಯಿತು. ಸತತ ಮೂರನೇ ಬಾರಿಗೆ ಯುವಕ ವೀರೇಶ ಆದೆಪ್ಪ ಚಿನ್ನಾನ್ ಕಂಬ ಹತ್ತುವ ಮೂಲಕ ಪ್ರಥಮ ಸ್ಥಾನ ಪಡೆದರೆ, ಶಂಕರ ದ್ವಿತೀಯ ಸ್ಥಾನ ಪಡೆದರು.ಮಾಜಿ ಶಾಸಕ ರಾಜಾವೆಂಕಟಪ್ಪ ಅವರು ಪ್ರಥಮ ಸ್ಥಾನಕ್ಕೆ 5 ತೊಲೆ, ದ್ವಿತೀಯ ಸ್ಥಾನಕ್ಕೆ 2.5 ತೊಲೆ ಬೆಳ್ಳಿ ಕಡಗ ನೀಡಿ ವಿಜೇತರನ್ನು ಸನ್ಮಾನಿಸಿ ಗೌರವಿಸಲಾಯಿತು.ನೂತನವಾಗಿ ತಯಾರಿಸಿದ ಹಾಲುಗಂಬವನ್ನು ಪಟ್ಟಣದ ಬಸವ ವೃತ್ತದಿಂದ ಬಯಲು ಆಂಜನೇಯ ದೇವಸ್ಥಾನದವರೆಗೆ ಮೆರವಣಿಗೆ ಮೂಲಕ ತಂದು ಸ್ಥಾಪಿಸಲಾಯಿತು. ಶನಿವಾರ ಬೆಳಿಗ್ಗೆಯಿಂದ ದೇವಸ್ಥಾನದಲ್ಲಿ ಆಂಜನೇಯ ಮೂರ್ತಿಗೆ ಎಲೆ ಪೂಜೆ, ಅಭಿಷೇಕ ಜೊತೆಗೆ ವಿಶೇಷ ಪೂಜೆಗಳು ನಡೆದವು. ಪಟ್ಟಣ ಸೇರಿದಂತೆ ಸುತ್ತಲಿನ ಗ್ರಾಮಗಳ ಗ್ರಾಮಸ್ಥರು ಉತ್ಸವದಲ್ಲಿ ಪಾಲ್ಗೊಂಡು ಉತ್ಸವಕ್ಕೆ ಮೆರುಗು ನೀಡಿದರು.ಸಿರವಾರದಲ್ಲಿ ಶನಿವಾರ ಹಾಲುಗಂಬವನ್ನು ವೀರೇಶ ಮೊದಲಿಗನಾಗಿ ಹತ್ತುವ ಮೂಲಕ ವಿಜೇತರಾದರು

## ಸಿಂಧನೂರು ಘಟಕದ ಎಸ್.ಐ.ಒ (SIO) ಅಧ್ಯಕ್ಷರಾಗಿ ಅಫ್ಜಲ್ ಹುಸೇನ್ ಆಯ್ಕೆ

ನೈಜ್ಯ ದೆಸೆ ನ್ಯೂಸ್



ಸಿಂಧನೂರು: ಡಿ – 21 ರಂದು ಸಿಂಧನೂರು ಘಟಕದ ಕಾರ್ಯಾಲಯದಲ್ಲಿ ನಡೆದ ಚುನಾವಣೆಯಲ್ಲಿ ಬ್ರದರ್. ಅಫ್ಜಲ್ ಹುಸೇನ್ ಅವರು ಸರ್ವಾನುಮತದಿಂದ 2026 ಅವಧಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಇವರು ಸಿಂಧನೂರು ಘಟಕದ ಕಾರ್ಯದರ್ಶಿಯಾಗಿ ಕೂಡಾ ಸೇವೆ ಸಲ್ಲಿಸಿ ವಿದ್ಯಾರ್ಥಿ ಸಂಘಟನೆಯನ್ನೂ ಮುನ್ನಡೆಸಿದ್ದಾರೆ. ವಿದ್ಯಾರ್ಥಿ ದೆಸೆಯಿಂದಲೇ ನಾಯಕತ್ವ ಗುಣಗಳನ್ನು ಹೊಂದಿದ ಅವರನ್ನು ಅಲ್ಲಾಹ್ ಅವರ ನಾಯಕತ್ವದಲ್ಲಿ ಸ್ಥೈರ್ಯ (ಇಸ್ತಿಖಾಮತ್), ಸಾಮರ್ಥ್ಯ (ಸಲಾಹಿಯತ್) ಮತ್ತು ಧೈರ್ಯವನ್ನು ದಯಪಾಲಿಸಲಿ ಸಿಂಧನೂರು ಘಟಕವು ತನ್ನ ಸಂದೇಶವನ್ನು ವಿದ್ಯಾರ್ಥಿ ಸಮುದಾಯದವರೆಗೆ ಯಶಸ್ವಿಯಾಗಿ ತಲುಪಿಸುವಲ್ಲಿ ಹಾಗೂ ಸಾಮಾಜಿಕ ಸೇವೆಗಳಲ್ಲಿ ಯಶಸ್ಸು ಸಾಧಿಸಲಿ ಎಂದು ಪ್ರಾರ್ಥಿಸೋಣ

## ಎಸ್.ಐ.ಒ(SIO)ಜಿಲ್ಲಾಧ್ಯಕ್ಷರಾಗಿ ಇಮ್ತಿಯಾಜ್ ಸಿಂಧನೂರು ಆಯ್ಕೆ



ನೈಜ್ಯ ದೆಸೆ ನ್ಯೂಸ್

ರಾಯಚೂರು :ಎಸ್.ಐ.ಒ ರಾಯಚೂರು ಜಿಲ್ಲಾಧ್ಯಕ್ಷರಾಗಿ ಇಮ್ತಿಯಾಜ್ ಸಿಂಧನೂರು ಅವರು 2026 ನೆಯ ಅವಧಿಗೆ ಆಯ್ಕೆಯಾಗಿದ್ದಾರೆ.ಇಮ್ತಿಯಾಜ್ ಅವರು ವಿದ್ಯಾರ್ಥಿ ದೆಸೆಯಿಂದಲೇ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳುತ್ತಾ ಬಂದಿದ್ದಾರೆ ಅವರು ಸಿಂಧನೂರಿನಲ್ಲಿ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿ ಸಿಂಧನೂರಿನಲ್ಲಿ ಹಲವಾರು ವಿದ್ಯಾರ್ಥಿಗಳಿಗೆ ಉತ್ತಮ ಮಾರ್ಗದರ್ಶನ ನೀಡುತ್ತಾ ಅವರಿಗೆ ದೈವಿಕ ಮಾರ್ಗದಶನದೆಡೆಗೆ ಕರೆದೊಯ್ಯಲು ಉತ್ತಮ ಸೇವೆ ನೀಡಿದ್ದಾರೆ ಹಾಗೂ ಸಿಂಧನೂರಿನ ಎಸ್.ಐ.ಒ ವಿದ್ಯಾರ್ಥಿ ಸಂಘಟನೆಯ ಅಧ್ಯಕ್ಷರಾಗಿ,ಕಾರ್ಯದರ್ಶಿಯಾಗಿ ಕೂಡಾ ಸೇವೆ ಸಲ್ಲಿಸಿದ್ದಾರೆ ಹಾಗೂ ಸಿಂಧನೂರಿನಲ್ಲಿ ಅನೇಕ ಪರಿಸರ ಹಾಗೂ ಸಾಮಾಜಿಕ ಸೇವೆಗಳನ್ನು ಮಾಡುತ್ತಾ ಬಂದಿದ್ದಾರೆ ಇಂದು ನಡೆದ ಚುನಾವಣೆಯಲ್ಲಿ ಅವರು ಜಿಲ್ಲಾಧ್ಯಕ್ಷರಾಗಿರುವುದು ಖುಷಿಯ ಸಂಗತಿ ಅಲ್ಲಾಹ್ ಅವರ ನಾಯಕತ್ವದಲ್ಲಿ ಸ್ಥಿರತೆ (ಇಸ್ತಿಕಾಮತ್), ಸಾಮರ್ಥ್ಯ (ಸಲಾಹಿಯತ್) ಮತ್ತು ಧೈರ್ಯವನ್ನು ಅನುಗ್ರಹಿಸಲಿ. ವಿದ್ಯಾರ್ಥಿ ಸಮುದಾಯದ ನಡುವೆ ಸಂದೇಶವನ್ನು ಪರಿಣಾಮಕಾರಿಯಾಗಿ ತಲುಪಿಸಿ, ಘಟಕವು ಯಶಸ್ಸು ಸಾಧಿಸಲಿ,ಇನ್ನೂ ಹೆಚ್ಚು ಸಂಘಟನೆಯಲ್ಲಿ ಪಾಲ್ಗೊಂಡು ವಿದ್ಯಾರ್ಥಿಗಳ ಶೈಕ್ಷಣಿಕ, ಸಾಮಾಜಿಕ ಮತ್ತು ನೈತಿಕ ಅಭಿವೃದ್ಧಿ ಹಾಗೂ ವಿದ್ಯಾರ್ಥಿ ಯುವಕರಲ್ಲಿ ತಿಳುವಳಿಕೆ ಹಾಗೂ ವಿದ್ಯಾರ್ಥಿಗಳಿಗೆ ಸುನ್ನತ ಪ್ರಕಾರ ತಮ್ಮ ವಯಕ್ತಿಕ ಹಾಗೂ ಸಾಮೂಹಿಕ ಜೀವನವನ್ನು ಸಾಗಿಸಲು ಪ್ರೇರೇಪಿಸಿ ಶಿಕ್ಷಣ ವ್ಯವಸ್ಥೆಯಲ್ಲಿ ನೈತಿಕ ಮೌಲ್ಯಗಳಿಗೆ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಶೈಕ್ಷಣಿಕ ವಾತಾವರಣಕ್ಕೆ ಪ್ರೋತ್ಸಾಹ ನೀಡಿ ಎಸ್.ಐ.ಒ ದ ಕಲಿಕೆಯೇ ಕಲ್ಯಾಣ ಅಭಿಯಾನವನ್ನು ಪೂರ್ಣಗೊಳಿಸಿ ಕಲ್ಯಾಣ ಕರ್ನಾಟಕದ ಶೈಕ್ಷಣಿಕ ಉನ್ನತಿಗಾಗಿ ಶ್ರಮಿಸಲು ಇನ್ನೂ ಹೆಚ್ಚಿನ ಶಕ್ತಿ ನೀಡಲಿ ಎಂದು ಪ್ರಾರ್ಥಿಸೋಣ

## ಡಾ.ಸುರೇಖಾಗೆ "ವೈದ್ಯಕೀಯ ಸೇವಾ ರತ್ನ" ಪ್ರಶಸ್ತಿ

ನೈಜ್ಯ ದೆಸೆ ನ್ಯೂಸ್



ಕವಿತಾಳ:–ಪಟ್ಟಣದ ಶಿಕ್ಷಕ ಬಸವರಾಜ ಪಲಕನಮರಡಿ ಅವರ ಮಗಳು ಡಾ.ಸುರೇಖಾ ಪಲಕನಮರಡಿ ಅವರಿಗೆ ವನಸಿರಿ ಫೌಂಡೇಷನ್ ವತಿಯಿಂದ "ವೈದ್ಯಕೀಯ ಸೇವಾ ರತ್ನ" ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಇತ್ತೀಚೆಗೆ ಬಳ್ಳಾರಿಯಲ್ಲಿ ನಡೆದ ಕಾರ್ಯಮಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗಿದೆ. ಡಾ. ಸುರೇಖಾ ಪಲಕನಮರಡಿ ಅವರು ಪ್ರಸ್ತುತ ಆನ್ವರಿ ಗ್ರಾಮದ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದು ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ಕವಿತಾಳ ಪಟ್ಟಣ ಹಾಗೂ ಆನ್ವರಿ ಗ್ರಾಮದ ಸಾರ್ವಜನಿಕರು ಹರ್ಷ ವ್ಯಕ್ತಪಡಿಸಿದ್ದಾರೆ.

## ಮಾನ್ವಿಯಲ್ಲಿ ವಿಶ್ವ ಧ್ಯಾನ ಹಾಗೂ ಅಭಿನಂದನಾ ಕಾರ್ಯಕ್ರಮ





ಮಾನ್ವಿ : ಪಟ್ಟಣದ ಸರಕಾರಿ ಹಣ್ಣಿನ ತೋಟದಲ್ಲಿ ಇಂದು ಬೆಳಗ್ಗೆ ಕಾರ್ಯಕ್ರಮ ನಡೆಯಿತು . ಈ ಕಾರ್ಯಕ್ರಮಕ್ಕೆ ದಿವ್ಯ ಸಾನಿಧ್ಯ ವಹಿಸಿದ ಪರಮಪೂಜ್ಯ ಕಲ್ಮಠ ಶ್ರೀಗಳಾದ ಶ್ರೀ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾ ಸ್ವಾಮಿಗಳು ಮಾನ್ವಿ ಇವರು ವಿಶ್ವ ಧ್ಯಾನ ದಿನಾಚರಣೆ ತಮ್ಮ ಆಶೀರ್ವಾದ ವಚನದಲ್ಲಿ ಮಾನವನ ಜೀವನದ ಅಂತರಂಗದಲ್ಲಿ ಆಳವಾಗಿ ಹುಡುಕಿದಾಗ ಜೀವನ ಸಾಕ್ಷಾತ್ಕಾರವಾಗುತ್ತದೆ ಎಂದು ಹಲವಾರು ದೃಷ್ಟಾಂತದ ಮೂಲಕ ಜ್ಞಾನದ ಮತ್ತು ಧ್ಯಾನದ ಮಹತ್ವವನ್ನು ತಿಳಿಸಿದರು. ಹಾಗೂ ಅಂತರಂಗದಲ್ಲಿ ಗಟ್ಟಿಯಾಗಬೇಕಾದರೆ ನಿತ್ಯ ಧ್ಯಾನ ಮಾಡಬೇಕು ಧ್ಯಾನ ಮಾಡಿದಾಗ ಮಾತ್ರ ಉತ್ತಮ ಹವ್ಯಾಸ ಉತ್ತಮ ಆರೋಗ್ಯ ಉತ್ತಮ ಜೀವನ ಸಾಧ್ಯ ಎಂದು ಹೇಳಿದರು. ಈ ಕಾರ್ಯಕ್ರಮದ ಉಪನ್ಯಾಸವನ್ನು ನೀಡಲು ರಘುನಂದನ್ ಶಿಕ್ಷಕರು ಕೋನಾಪುರ ಪೇಟೆ ಶಾಲೆ ಮಾನ್ವಿ ಇವರು ಧ್ಯಾನ ಎಂದರೇನು ಮನಸ್ಸನ್ನು ತರಬೇತಿಗೊಳಿಸಿ, ಏಕಾಗ್ರತೆ ತರಲು ಹಾಗೂ ವ್ಯಕ್ತಿಯನ್ನು ಸಿದ್ಧಗೊಳಿಸಲು ಧ್ಯಾನ ಅವಶ್ಯಕತೆ ಎಂದು ಹೇಳಿದರು ಹಾಗೂ ಧ್ಯಾನದ ಮಹತ್ವವನ್ನು ಹಾಗೂ ಧ್ಯಾನದ ಪ್ರಯೋಜನಗಳ ಕುರಿತು ವಿವರವಾದ ಮಾಹಿತಿಯನ್ನು ಹೇಳಿದರು. ಈ ಕಾರ್ಯಕ್ರಮದಲ್ಲಿ ಮೊದಲಿಗೆ ಪ್ರಾರ್ಥನೆ ಗೀತೆಯನ್ನು ಕುಮಾರಿ ಜಿ.ದೇವಿಕಾ ಪ್ರಾರ್ಥಿಸಿದರು. ಎಂ ನೀಲಕಂಠಪ್ಪ ಸ್ವಾಗತಿಸಿದರು. ಮೌನ ಮಿತ್ರ ಯೋಗ ಸಮಿತಿಯ ಗುರುಗಳಾದಂತಹ ಮೌನೇಶ್ ಪೋತ್ನಾಳ ವಂದಿಸಿದರು. ಈ ಒಂದು ಕಾರ್ಯಕ್ರಮದಲ್ಲಿ ಯೋಗ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

## ಪಟ್ಟಣದ ಪತ್ರಿಕೆ ವಿತರಿಕರಿಗೆ ಲಾಯನ್ಸ ಕ್ಲಬ್ ಮಾನ್ವಿ ವತಿಯಿಂದ ಸ್ವೆಟರ್‌ಗಳ ವಿತರಣೆ – ಎಂ. ನಾಗರಾಜ.




ನೈಜ್ಯ ದೆಸೆ ನ್ಯೂಸ್

ಮಾನ್ವಿ: ಪಟ್ಟಣದ ಮಾನ್ವಿ ಬ್ಯಾಂಕ್ ಸಭಾಂಗಣದಲ್ಲಿ ಮಾನ್ವಿ ಲಯನ್ಸ್ ಕ್ಲಬ್ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಪಟ್ಟಣದಲ್ಲಿ ವಿವಿಧ ದಿನ ಪತ್ರಿಕೆಗಳನ್ನು ವಿತರಿಸುವ ಪತ್ರಿಕ ವಿತರಕರಿಗೆ ಮಾನ್ವಿ ಲಯನ್ಸ್ ಕ್ಲಬ್‌ನ ಅಧ್ಯಕ್ಷರಾದ ಎಂ. ನಾಗರಾಜ ಸ್ವೆಟರ್‌ಗಳನ್ನು ವಿತರಿಸಿ ಮಾತನಾಡಿ ಪ್ರತಿ ದಿನ ಪತ್ರಿಕೆಗಳಲ್ಲಿ ಬರವ ಸುದ್ದಿಗಳನ್ನು ಹೊತ್ತ ದಿನ ಪತ್ರಿಕೆಗಳನ್ನು ಬೆಳಗಿನಜಾವವೇ ಮನೆ ಬಾಗಿಲಿಗೆ ತಲುಪಿಸುವ ಪತ್ರಿಕೆಗಳನ್ನು ಹಂಚುವ ಬಹುತೇಕ ಹುಡುಗರು ವಿದ್ಯಾರ್ಥಿಗಳಾಗಿದ್ದು ಅವರು ಪ್ರತಿದಿನ ಪತ್ರಿಕೆಗಳನ್ನು ಹಂಚುವ ಮೂಲಕ ಬರುವ ಸ್ವಲ್ಪ ಅದಾಯದಿಂದ ತಮ್ಮ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸುತ್ತಿರುವುದು ಕಂಡುಬರುತ್ತದೆ ಡಾ. ಎ. ಪಿ. ಜೆ. ಅಬ್ದುಲ್ ಕಲಾಂ ರವರು ಕೂಡ ತಮ್ಮ ವಿದ್ಯಾರ್ಥಿ ಜೀವನದಲ್ಲಿ ಪತ್ರಿಕೆಗಳನ್ನು ಹಂಚುವ ಮೂಲಕ ವಿದ್ಯಾಭ್ಯಸವನ್ನು ಪೂರ್ಣಗೊಳಿಸಿ ದೇಶದ ಉನ್ನತ ಸ್ಥಾನವಾದ ರಾಷ್ಟ್ರಪತಿ ಹುದ್ದೆಯನ್ನು ಅಲಂಕಾರಿಸುವ ಮೂಲಕ ಇತರರಿಗೆ ಮಾದರಿಯಾಗಿದ್ದರು. ಇತ್ತಿಚಿನ ದಿನಗಳಲ್ಲಿ ತೀವ್ರವಾದ ಚಳಿ ಇಂದಾಗಿ ಪತ್ರಿಕ ವಿತರಕರ ಆರೋಗ್ಯದ ಮೇಲೆ ಪರಿಣಾಮವಾಗಬಾರದು ಎನಗ್ನುವ ಉದ್ದೇಶದಿಂದ ಮಾನ್ವಿ ಲಯನ್ಸ್ ಕ್ಲಬ್‌ನ ವತಿಯಿಂದ ಪತ್ರಿಕ ವಿತರಕರಿಗೆ ಸ್ವೆಟರ್‌ಗಳನ್ನು ವಿತರಣೆ ಮಾಡಲಾಗುತ್ತಿದೆ ಮುಂದಿನ ದಿನಗಳಲ್ಲಿ ನಮ್ಮ ಮಾನ್ವಿ ಲಯನ್ಸ್ ಕ್ಲಬ್‌ನ ವತಿಯಿಂದ ಪತ್ರಿಕ ವಿತರಕರಿಗೆ ಉಚಿತ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆ ಶಿಬಿರ, ವಿತರಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಪತ್ರಿಕೆಗಳನ್ನು ಹಂಚುವ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕೆ ಅಗತ್ಯ ಆರ್ಥಿಕ ನೆರವನ್ನು ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಕೇಲವೆ ದಿನಗಳಲ್ಲಿ ಪಟ್ಟಣದಲ್ಲಿ ಹುಬ್ಬಳಿ ಜೋಷಿ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ಕಣ್ಣಿನ ಆಸ್ಪತ್ರೆಯನ್ನು ಪ್ರಾರಂಭಿಸಿ ತಾಲೂಕಿನ ಜನರಿಗೆ ಉತ್ತಮ ನೇತ್ರ ಚಿಕಿತ್ಸೆ ನೀಡುವ ಕಾರ್ಯವನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.ಪಟ್ಟಣದ 20ಕ್ಕೂ ಹೆಚ್ಚು ಪತ್ರಿಕೆ ವಿತರಕರಿಗೆ ಹಾಗೂ ರಾತ್ರಿ ವೇಳೆ ಕೇಲಸ ಮಾಡುವ 10ಕ್ಕೂ ಹೆಚ್ಚು ಕಾವಾಲುಗರರಿಗೆ ಸ್ವೆಟರ್‌ಗಳನ್ನು ವಿತರಿಸಲಾಯಿತು.ಕಾರ್ಯಕ್ರಮದಲ್ಲಿ ಡಾ. ರೋಹಿಣಿ ಮಾನ್ವಿಕರ್, ಡಾ. ಸುರೇಶ ಬಾಬು, ಶ್ರೀ ನಗರೇಶ್ವರ ಆರ್ಯ ವೈಶ್ಯ ಸಂಘದ ತಾ. ಅಧ್ಯಕ್ಷರಾದ ಆರ್. ಮುತ್ತುರಾಜ್ ಶೆಟ್ಟಿ, ವಿಪ್ರಸಮಾಜದ ತಾ.ಅಧ್ಯಕ್ಷರಾದ ಮುದ್ದುರಂಗ ರಾವ್ ಮುತಲಿಕ್ , ರಾಮಲಿಂಗಪ್ಪ ಲಯನ್ಸ ಕ್ಲಬ್‌ನ ಕಾರ್ಯದರ್ಶಿ ಶಾಂತಮೂರ್ತಿ, ಖಜಾಂಚಿ ಶ್ರೀರಾಮ ರಾಜು, ಸದಸ್ಯರಾದ ಈರಣ್ಣ ಮರ್ಲಟ್ಟಿ, ವೆಂಕಟೇಶ್ ಇಲ್ಲೂರ್, ಡಾ. ಬಸವರಾಜ್ ಸಜ್ಜನ್, ಬಸವರಾಜ್ ಕಿರ್ಡಿ,ಶಂಭುಲಿಂಗಯ್ಯಸ್ವಾಮಿ ಹಿರೇಮಠ,ತಾ.ಪತ್ರಿಕಾ ವಿತರಕರ ಸಂಘದ ಅಧ್ಯಕ್ಷರಾದ ಬಸವನಗೌಡ ಮೇಟಿಸೇರಿದಂತೆ ಇನ್ನಿತರರು ಇದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101